5-30 P. M.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ.—ಕಾಲೇಜು ಶಿಕ್ಷಣ ಸಚಿವರಾದ ಶಂಕರರಾಯರು ಈ ಸದನದಲ್ಲಿ ಇಲ್ಲ. ಹಾಗೂ ಈ ವಿಷಯವನ್ನು ಇಲ್ಲೇ ಇರುವ ಪ್ರಾಥಮಿಕ ಹಾಗೂ ಸೆಕೆಂಡರಿ ವಿದ್ಯಾ ರಾಜ್ಯ ಸಚಿವೆಯರು ಈ ವಿಷಯವನ್ನು ಮಾನ್ಯ ಶಂಕರರಾಯರಿಗೆ ತಿಳಿಸಲಿ ಎಂದು ನಾನು ತಮ್ಮ ಮೂಲಕ ಅವರಿಗೆ ಹೇಳುತ್ತಿದ್ದೇನೆ. ಮಾನ್ಯ ಸಚಿವೆಯವರು ಈ ಕಡೆ ಗಮನ ಹರಿಸುತ್ತಿಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಮಾನ್ಯ ಶಂಕರರಾಯರು ವಿಧಾನ ಪರಿಷತ್ತಿನಲ್ಲಿ ಇದ್ದಾರೆ.

MR. SPEAKER.—Anyone of you on behalf of the Minister note it.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ,...

MR. SPEAKER.—She is concerned with Primary and Secondary Education. The hon. Ministers should not feel this type of helplessness. One of you will have to take note of it. You have collective responsibility. Consult the Minister and answer. ನಾನಲ್ಲ, ಅವರಿಲ್ಲ, ಇವರಿಲ್ಲ ಎನ್ನುವುದು ಸರಿಯಲ್ಲ. The point is, he is supposed to be here when the house is in session. If the other House is in Session, he is supposed to be there. He is supposed to be there if he is not here. Any one of you will have to take note of it and convey to him. It is an issue concerning a number of students and their career also.

SRI MALLIKARJUN M. KHARGE —I will inform the concerned Minister and he will state in the House tomorrow.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ನನ್ನನ್ನೂ ಹಾಗೂ ವಿರೋಧ ಪಕ್ಷದ ನಾಯಕರನ್ನು ಕರೆದು ಮಾತನಾಡುವ ಅವಕಾಶ ಕಲ್ಪಿಸಿಕೊಟ್ಟಿದ್ದರು. ಆದರೂ ಕೂಡಾ ನಮ್ಮ ವಿರೋಧ ಪಕ್ಷದ ನಾಯಕರೂ ಹಾಗೂ ನಾವು ಹೇಳತಕ್ಕದ್ದು ಇಷ್ಟೇ ಈ ಬಿ.ಎಸ್ಸಿ., ಪರೀಕ್ಷೆ ಫಲಿತಾಂಶ ಬರುವುದು ನಿಧಾನವಾಗುತ್ತಿರುವುದರಿಂದ ಇವರು ಮೆಡಿಕಲ್‌ಗೆ ಹೋಗುವುದರಲ್ಲಿ ತೊಂದರೆಯಾಗುತ್ತದೆ. ಕಳೆದ ವರ್ಷ ತೊಂದರೆ ಪಟ್ಟ ವಿದ್ಯಾರ್ಥಿಗಳು, ಕಳೆದ ವರ್ಷ ಈ ನಿಧಾನದಿಂದಾಗಿ ಸೀಟು ಸಿಗದವರು ಈ ವರ್ಷ ಸೇರಿಕೊಂಡಿದ್ದಾರೆ. ಇದರಿಂದಾಗಿ ಈ ವರ್ಷ ಉತ್ತೀರ್ಣರಾಗುವವರೂ ಸಹಾ ಇದೇ ರೀತಿ ಒಂದು ವರ್ಷ ಕಾಯಬೇಕಾಗುತ್ತದೆ. ನಾನು ಆರೋಗ್ಯ ಇಲಾಖೆ ಮಂತ್ರಿಗಳು ಹಾಗೂ ಡೈರೆಕ್ಟರ್‌ರವರ ಜೊತೆ ಮಾತನಾಡಿ ಅವರಿಗೆ ಜನವರಿಯಿಂದಲೇ ಕ್ಲಾಸ್ ಪ್ರಾರಂಭ ಮಾಡಿ ಎಂದು ಹೇಳಿದೆ. ಆದು ಆಗಲಿಲ್ಲ. ಈ ರೀತಿ ಬಿ.ಎಸ್.ಸಿ. ಡಿಗ್ರೀ ಪರೀಕ್ಷೆ ಫಲಿತಾಂಶ ನಿಧಾನವಾಗುತ್ತಿರುವುದರಿಂದ ನಿಜವಾಗಿ ಈ ವರ್ಷ ೭೫-೮೦ ಪರ್ಸೆಂಟ್ ತೆಗೆದಂ ಪಾಸಾಗುವ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತದೆ. ಆದ್ದರಿಂದ ಮುಂದಿನ ವರ್ಷ ಇದು ಪುನರಾವರ್ತಿ ಆಗದಹಾಗೆ ಜೂನ್ ಒಳಗೇ ಬಿ.ಎಸ್.ಸಿ. ರಿಸಲ್ಟ್ ಬಾರದಿದ್ದರೆ, ಆ ವಿದ್ಯಾರ್ಥಿಗಳಿಗೂ ತೊಂದರೆ ಆಗುವುದರಿಂದ, ಇದು ಆಗದಹಾಗೆ ಸರ್ಕಾರ ನೋಡಿಕೊಳ್ಳಬೇಕೆಂದು ನಾನು ಹೇಳುತ್ತೇನೆ.

Financial Business

Discussion on the Demands for Grants for 1982-83. (Contd)

† ಶ್ರೀ ಎಂ. ಸಿ ಬಸಪ್ಪ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಈ ಸದನದ ಮುಂದೆ ಅವರ ಇಲಾಖೆಗಳಿಗೆ ಸಂಬಂಧಪಟ್ಟ, ಗ್ರಾಮಾಂತರ ನೀರು ಸರಬರಾಜು ನೈರ್ಮಲ್ಯ ಸಾಮುದಾಯಿಕ ಅಭಿವೃದ್ಧಿ, ರಾಷ್ಟ್ರೀಯ ಗ್ರಾಮಾಂತರ ಉದ್ಯೋಗ ಯೋಜನೆ, ಹಾಗೂ ಐ.ಆರ್.ಡಿ.ಪಿ. ಬಗ್ಗೆ ಬೇಡಿಕೆಗಳನ್ನು ಸಭೆಯ ಅನುಮೋದನೆಗೆ ಇಟ್ಟಿದ್ದಾರೆ. ಬಹುಶಃ ಈ ಎಲ್ಲ ಬೇಡಿಕೆಗಳನ್ನೂ ಕೂಡಾ ನಾನು ಸ್ವಾಗತಿಸುತ್ತೇನೆ. ಮತ್ತು ನನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತ

ಪಡಿಸುತ್ತಾ ಕೆಲವು ಸಲಹೆಗಳನ್ನು ಕೊಡಬೇಕೆಂದು ನಾನು ಪ್ರಯತ್ನಪಡುತ್ತೇನೆ. ಸ್ವಾಮಿ, ಗ್ರಾಮಾಂತರ ಅಭಿವೃದ್ಧಿಯ ಬಗ್ಗೆ ನಾನು ಬಹಳ ದಿವಸಗಳಿಂದ ಮಾತನಾಡುತ್ತಿದ್ದೇನೆ. ಬಹುಶಃ ಏನು ಗುರಿ ಇಟ್ಟುಕೊಂಡು ಸಾಧನೆ ಮಾಡಬೇಕೆಂದಿದ್ದಾರೆ ಆ ಗುರಿ ಮುಟ್ಟುವುದಕ್ಕೆ ಸಾಧ್ಯವಾಗಿಲ್ಲ. ಕಾರಣ ಇಷ್ಟೇ. ಸಮಸ್ಯೆ ಬೃಹದಾಕಾರವಾಗಿದೆ. ಸರ್ಕಾರ ಎಷ್ಟೇ ಪ್ರಯತ್ನ ಮಾಡಿದರೂ ಕೂಡಾ ಆ ಒಂದು ಗುರಿಯನ್ನು ಮುಟ್ಟುವುದಕ್ಕೆ ಇನ್ನೂ ಅನೇಕ ವರ್ಷಗಳು ಬೇಕಾಗುತ್ತದೆಂದರೆ ತಪ್ಪಾಗಲಾರದು. ಆದರೆ ಈ ಬಗ್ಗೆ ನಡೆಯುತ್ತಿರುವ ಪ್ರಯತ್ನಕ್ಕಿಂತಾ ಇನ್ನೂ ಹೆಚ್ಚಿನ ಪ್ರಯತ್ನ ಮಾಡತಕ್ಕದ್ದು ಆಗತ್ಯ ವೆಂದು ನಾನು ಹೇಳುತ್ತೇನೆ. ಕುಡಿಯುವ ನೀರಿನ ಬಗ್ಗೆ ಪ್ರಸ್ತಾಪ ಮಾಡುವಾಗ, ಕುಡಿಯುವ ನೀರಿನ ಒಂದು ಮೂಲಭೂತ ಅವಶ್ಯಕತೆ ಎಷ್ಟು ಇದೆ ಎಂಬುದು ತಮಗೆಲ್ಲರಿಗೂ ಗೊತ್ತಿರತಕ್ಕ ವಿಷಯವೇ ಆಗಿದೆ. ತಾವು ಕೊಟ್ಟಿರತಕ್ಕ ವರದಿಯಲ್ಲಿ ಆ ವಿಷಯವಾಗಿ ಹೇಳಿದ್ದೀರಿ. ಈ ಬಗ್ಗೆ ತಾವು ಮಾಡಿರ ತಕ್ಕ ಪ್ರಯತ್ನ ಏನು ? ನೀವು ಸರ್ವೇ ಮಾಡಿ ಇಟ್ಟಿದ್ದೀರಿ. ನಮ್ಮ ರಾಜ್ಯದಲ್ಲಿ ಸುಮಾರು ೨೬,೮೨೬ ಹಳ್ಳಿಗಳು ಇವೆ. ಕುಗ್ರಾಮಗಳೆಂದು ಹೇಳುವುದಕ್ಕೆ ತಾವು ಹ್ಯಾಮ್ಲೆಟ್ಸ್ ಎಂದು, ಅವು ೨೧,೨೭೪ ಇವೆಯೆಂದಿದ್ದೀರಿ.

ಶ್ರೀ ಬೇಗಾನೆ ರಾಮಯ್ಯ.—ದಾಖಲೇ ಗ್ರಾಮಗಳು ಎಂದು.

ಶ್ರೀ ಎಂ. ಸಿ. ಬಸಪ್ಪ.—ಸರ್ಕಾರ ಕುಡಿಯುವ ನೀರಿನ ಬಗ್ಗೆ ಒಂದು ನೀತಿಯನ್ನು ಅನುಸರಿಸು ತ್ತಿದೆ. ಒಂದು ಸಾವಿರಕ್ಕೂ ಹೆಚ್ಚು ಪ್ರಜಾಸಂಖ್ಯೆಯುಳ್ಳ ಗ್ರಾಮಗಳಿಗೆ ಕೊಳವೆ ನೀರು ಸರಬರಾಜು ಹಾಗೂ ಸಾವಿರದೊಳಗೆ ಪ್ರಜಾಸಂಖ್ಯೆಯುಳ್ಳ ಗ್ರಾಮಗಳಿಗೆ ಬೋರ್ವೆಲ್ ಹಾಕಿಸಿ ಹ್ಯಾಂಡ್‌ಪಂಪ್ ಹಾಕಿ ನೀರು ಸರಬರಾಜು ಮಡುವ ನೀತಿಯನ್ನು ಪ್ರತಿಪಾದಿಸಿದ್ದಾರೆ. ಹಾಗೂ ಕುಡಿಯುವ ನೀರಿನ ಒಂದು ಅವಶ್ಯಕತೆಯನ್ನೂ ಪೂರೈಸದೇ ಇರತಕ್ಕ ಗ್ರಾಮಗಳ ಬಗ್ಗೆ ಕೂಡಾ ಕೊಟ್ಟಿದ್ದೀರಿ. ಹೆಚ್ಚೂ ಕಡಿಮೆ ಗ್ರಾಮದ ಹತ್ತಿರದಲ್ಲೇ ನೀರು ಸಿಗತಕ್ಕ ಗ್ರಾಮಗಳು ೧೭,೨೩೭ ಇವೆಯೆಂದಿದ್ದೀರಿ. ಲವಣಾಂತ ಇದ್ದು ಸೇವನೆಗೆ ಯೋಗ್ಯವಿಲ್ಲದ ನೀರು ಸಿಗತಕ್ಕ ೨,೫೮೬ ಗ್ರಾಮಗಳು ಇವೆಯೆಂದು ಹೇಳಿದ್ದೀರಿ. ೧೮೦ ಗ್ರಾಮಗಳಿಗೆ ಯಾವ ರೀತಿಯ ನೀರಿನ ವ್ಯವಸ್ಥೆ ಕೂಡಾ ಮಾಡುವುದಕ್ಕೆ ಆಗಿಲ್ಲ ವೆಂದು ಹೇಳಿದ್ದೀರಿ. ಸ್ವಾಮಿ ಈ ಬಗ್ಗೆ ನಾವು ಮಾಡತಕ್ಕ ಪ್ರಯತ್ನ ಏನು ಎಷ್ಟು ಸಾಧನೆ ಆಗಿದೆ. ಮಾರ್ಚಿ ೧೯೮೧ಕ್ಕೆ ಸುಮಾರು ೩೫,೪೨೦ ಕೊಳವೆ ಬಾವಿಗಳನ್ನು ಪೂರ್ಣ ಮಾಡಿದ್ದೀರಿ, ಆದರೆ ಈ ಬಗ್ಗೆ ಇರುವ ಸಮಸ್ಯೆಯನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಕೊಳವೆ ಬಾವಿಗಳನ್ನು ಮಾಡಿ ಅವಕ್ಕೆ ಹ್ಯಾಂಡ್‌ಪಂಪ್‌ಗಳನ್ನು ಹಾಕಿದರೆ, ನೀರು ಸರಸರಾಜು ಆಯಿತು ಎಂಬ ಭ್ರಮೆ ಏನಿದೆ ಅದು ಸತ್ಯಕ್ಕೆ ದೂರವಾದುದು. ಈಗ ಏನು ಹ್ಯಾಂಡ್‌ಪಂಪ್‌ಗಳನ್ನು ಅಳವಡಿಸಲಾಗುತ್ತಿದೆ, ಆವು ವರ್ಷಕ್ಕೆ ೨ಸಾರಿ, ೩ ಸಾರಿ ರಿಪೇರಿಯಾಗಿರುವ ನಿದರ್ಶನಗಳನ್ನು ಸರ್ಕಾರದ ಗಮನಕ್ಕೆ ಎಷ್ಟೋ ಸಾರಿ ತರಲಾಗಿದೆ. ಏನು ೩೫, ೪೨೦ ಕೊಳವೇ ಬಾವಿಗಳನ್ನು ಮಾಡಿದ್ದೀರೆಂದು ಹೇಳುತ್ತಿದ್ದೀರಿ, ಇವುಗಳಲ್ಲಿ ಶೇಕಡಾ ೩೫ ಬಾವಿಗಳು ರಿಪೇರಿಯಾಗದೇ ನಿಂತಿವೆ ಎನ್ನುವ ಅಂಶವನ್ನು ಇವತ್ತು ಸರ್ಕಾರದ ಗಮನಕ್ಕೆ ತರ ಬಯಸುತ್ತೇನೆ. ನಮ್ಮ ತಾಲ್ಲೂಕಿಗೆ ಮಾನ್ಯ ಮಂತ್ರಿಗಳು ಭೇಟಿ ಕೊಟ್ಟಾಗ ಅವರ ಗಮನಕ್ಕೆ ಇದನ್ನು ತಂದಿದ್ದೇನೆ. ಸಿಬ್ಬಂದಿ ಕಡಿಮೆ ಇದೆ. ವಾಹನ ನೌಕರ್ಯ ಇಲ್ಲ, ಮೆಕಾನಿಕಲ್ ಇಲ್ಲ ಎಂದು ಇಲಾಖೆ ಯವರು ಹೇಳುತ್ತಿದ್ದಾರೆ, ಇವುಗಳನ್ನು ಕೊಟ್ಟರೆ ರಿಪೇರಿ ಮಾಡುತ್ತಾರೆಂದು ಹೇಳಿದ್ದಾರೆ. ಈ ಬಗ್ಗೆ ಮಾನ್ಯ ಮಂತ್ರಿಗಳಿಂದ ಒರಲ್ ಇನ್‌ಸ್ಟ್ರಕ್ಷನ್ಸ್ ಕೊಟ್ಟರು. "Allright, as per Rules engage the vehicles and do it" ಎಂದು ಹೇಳಿದ್ದಾರೆ. ಸರ್ಕಾರದ ಮಟ್ಟದಲ್ಲಿ ಮಾನ್ಯ ಮಂತ್ರಿಗಳು ಕೊಟ್ಟ ಒರಲ್ ಭರವಸೆ ಯನ್ನು ಕನರ್ಫಮ್ ಮಾಡಿದ್ದೇವೆ. Till today they have not engaged the vehicles. ಆದೇನೋ ಅವರು ಎಕ್ಸಿಕ್ಯೂಟಿವ್ ಎಂಜಿನಿಯರರನ್ನು ಕನ್‌ಸಲ್ಟ್ ಮಾಡಬೇಕೆಂದು ಹೇಳುತ್ತಾರೆ. The Minister gives the oral instructions to the Secretary gives the written confirmation from the Secretariat. Even then the Assistant Executive Engineer at the taluk level wants his next superior i.e., the Excutive Engineer to confirm.

ಶ್ರೀ ಬೇಗಾನೆ ರಾಮಯ್ಯ.—ದಾಖಲೇ ಗ್ರಾಮಗಳು ಎಂದು.

ಶ್ರೀ ಎಂ. ಸಿ. ಬಸಪ್ಪ.—ಸರ್ಕಾರ ಕುಡಿಯುವ ನೀರಿನ ಬಗ್ಗೆ ಒಂದು ನೀತಿಯನ್ನು ಅನುಸರಿಸುತ್ತಿದೆ. ಒಂದು ಸಾವಿರಕ್ಕೂ ಹೆಚ್ಚು ಪ್ರಜಾಸಂಖ್ಯೆಯುಳ್ಳ ಗ್ರಾಮಗಳಿಗೆ ಕೊಳವೇ ನೀರು ಸರಬರಾಜು ಹಾಗೂ ಸಾವಿರದೊಳಗೆ ಪ್ರಜಾಸಂಖ್ಯೆಯುಳ್ಳ ಗ್ರಾಮಗಳಿಗೆ ಬೋರ್ವೆಲ್ ಹಾಕಿಸಿ ಹ್ಯಾಂಡ್ ಪಂಪ್ ಹಾಕಿ ನೀರು ಸರಬರಾಜು ಮಾಡುವ ನೀತಿಯನ್ನು ಪ್ರತಿಪಾದಿಸಿದ್ದಾರೆ. ಹಾಗೂ ಕುಡಿಯುವ ನೀರಿನ ಒಂದು ಅವಶ್ಯಕತೆಯನ್ನೂ ಪೂರೈಸದೇ ಇರತಕ್ಕ ಗ್ರಾಮಗಳ ಬಗ್ಗೆ ಕೂಡಾ ಕೊಟ್ಟಿದ್ದೀರಿ. ಹೆಚ್ಚು ಕಡಿಮೆ ಗ್ರಾಮದ ಪತ್ತಿರದಲ್ಲೇ ನೀರು ಸಿಗತಕ್ಕ ಗ್ರಾಮಗಳು ೧೭,೨೩೭ ಇವೆಯೆಂದಿದ್ದೀರಿ. ಲವಣಾಂಶ ಇದ್ದು ಸೇವನೆಗೆ ಯೋಗ್ಯವಲ್ಲದ ನೀರು ಸಿಗತಕ್ಕ ೨,೫೮೬ ಗ್ರಾಮಗಳು ಇವೆಯೆಂದು ಹೇಳಿದ್ದೀರಿ. ೧೮೦ ಗ್ರಾಮಗಳಿಗೆ ಯಾವ ರೀತಿಯ ನೀರಿನ ವ್ಯವಸ್ಥೆ ಕೂಡಾ ಮಾಡುವುದಕ್ಕೆ ಆಗಿಲ್ಲವೆಂದು ಹೇಳಿದ್ದೀರಿ. ಸ್ವಾಮಿ, ಈ ಬಗ್ಗೆ ನಾವು ಮಾಡತಕ್ಕ ಪ್ರಯತ್ನ ಏನು ? ಎಷ್ಟು ಸಾಧನೆ ಆಗಿದೆ ? ಮಾರ್ಚ್ ೮೧ಕ್ಕೆ ಸುಮಾರು ೩೫,೪೨೦ ಕೊಳವೆ ಬಾವಿಗಳನ್ನು ಪೂರ್ಣ ಮಾಡಿದ್ದೀರಿ. ಆದರೆ ಈ ಬಗ್ಗೆ ಇರುವ ಸಮಸ್ಯೆಯನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಕೊಳವೆ ಬಾವಿಗಳನ್ನು ಮಾಡಿ ಅವಕ್ಕೆ ಹ್ಯಾಂಡ್ ಪಂಪ್‌ಗಳನ್ನು ಹಾಕಿದರೆ, ನೀರು ಸರಬರಾಜು ಆಯಿತು ಎಂಬ ಭ್ರಮೆ ಏನಿದೆ ಅದು ಸತ್ಯಕ್ಕೆ ದೂರವಾದುದು. ಈಗ ಏನು ಹ್ಯಾಂಡ್ ಪಂಪ್‌ಗಳನ್ನು ಅಳವಡಿಸಲಾಗುತ್ತದೆ ಅವು ವರ್ಷಕ್ಕೆ ೨ ಸಾರಿ, ೩ ಸಾರಿ ರಿಪೇರಿಯಾಗಿರುವ ನಿದರ್ಶನಗಳನ್ನು ಸರ್ಕಾರದ ಗಮನಕ್ಕೆ ಎಷ್ಟೋ ಸಾರಿ ತರಲಾಗಿದೆ. ಏನು ೩೫,೪೨೦ ಕೊಳವೇ ಬಾವಿಗಳನ್ನು ಮಾಡಿದ್ದೀರೆಂದು ಹೇಳುತ್ತಿದ್ದೀರಿ, ಇವುಗಳಲ್ಲಿ ಶೇಕಡಾ ೩೫ ಬಾವಿಗಳು ರಿಪೇರಿಯಾಗದೇ ನಿಂತಿವೆ ಎನ್ನುವ ಆಶಯವನ್ನು ಇವತ್ತು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ನಮ್ಮ ತಾಲ್ಲೂಕಿಗೆ ಮಾನ್ಯ ಮಂತ್ರಿಗಳು ಭೇಟಿ ಕೊಟ್ಟಾಗ ಅವರ ಗಮನಕ್ಕೆ ಇದನ್ನು ತಂದಿದ್ದೇನೆ. ಸಿಬ್ಬಂದಿ ಕಡಿಮೆ ಇದೆ, ವಾಹನ ಸೌಕರ್ಯ ಇಲ್ಲ, ಮೆಕ್ಯಾನಿಕ್ ಇಲ್ಲ ಎಂದು ಇಲಾಖೆಯವರು ಹೇಳುತ್ತಿದ್ದಾರೆ. ಇವುಗಳನ್ನು ಕೊಟ್ಟರೆ ರಿಪೇರಿ ಮಾಡುತ್ತಾರೆಂದು ಹೇಳಿದ್ದಾರೆ. ಈ ಬಗ್ಗೆ ಮಾನ್ಯ ಮಂತ್ರಿಗಳಿಂದ ಓರಲ್ ಇನ್‌ಸ್ಟ್ರಕ್ಷನ್ಸ್ ಕೊಟ್ಟರು. "Alright, as per Rules engage the vehicles and do it." ಎಂದು ಹೇಳಿದ್ದಾರೆ. ಸರ್ಕಾರದ ಮಟ್ಟದಲ್ಲಿ ಮಾನ್ಯ ಮಂತ್ರಿಗಳು ಕೊಟ್ಟ ಓರಲ್ ಭರವಸೆಯನ್ನು ಕನ್‌ಫರ್ಮ್ ಮಾಡಿದ್ದೇವೆ. Till today they have not engaged the vehicles. ಆದೇನೋ ಅವರು ಎಕ್ಸಿಕ್ಯೂಟಿವ್ ಎಂಜಿನಿಯರ್‌ರನ್ನು ಕನ್‌ಸಲ್ಟ್ ಮಾಡಬೇಕೆಂದು ಹೇಳುತ್ತಾರೆ. The Minister gives the oral instructions to the Secretary. The Secretary gives the written confirmation from the Secretariat. Even then the Assistant Executive Engineer at the taluka level wants his next superior i.e., the Executive Engineer, to confirm.

ಸ್ವಾಮಿ, ಹಳ್ಳಿಗಾಡಿನಲ್ಲಿರತಕ್ಕ ಜನರಿಗೆ ನೀರನ ಬವಣೆ ಏನು ಎನ್ನುವುದು ಅರ್ಥವಾಗಿದೆಯೇ ? ಅರ್ಥವಾಗಿದ್ದಲ್ಲಿ ಏತಕ್ಕೆ ಈರೀತಿ ವರ್ತನೆ ಮಾಡುತ್ತಿದ್ದರು ಎಂಬುದನ್ನು ತಾವು ಪರಿಶೀಲನೆ ಮಾಡಬೇಕು. ಪೈಪ್ಡ್ ವಾಟರ್ ಸಪ್ಲೈಗೆ ಕೇಂದ್ರ ಸರ್ಕಾರ ಹೆಚ್ಚಿನ ಆದ್ಯತೆ ಕೊಟ್ಟು ಸುಮಾರು ೨೦೦–೨೫೦ ಎ.ಆರ್.ಡಬ್ಲ್ಯೂ ಯೋಜನೆಗಳನ್ನು ಮಂಜೂರುಮಾಡಿದೆ. ತಾವು ಕೂಡ ೧೦೦–೧೫೦ ಯೋಜನೆಗಳನ್ನು ಮಂಜೂರು ಮಾಡಿದ್ದೀರಿ. ೧೯೮೨–೮೩ರ ಹೊತ್ತಿಗೆ ಸುಮಾರು ೪೪೨೦ ಕೊಳವೆ ಬಾವಿಗಳನ್ನು ಪೂರೈಸಬೇಕೆಂದು ಹೇಳಿದ್ದೀರಿ. ಸ್ಟೇಟ್ ಸ್ಪಾನ್ಸರ್‌ಡ್‌ನಿಂದ ೬೬೦ ಲಕ್ಷ ಖರ್ಚು ಮಾಡಬೇಕೆಂದೂ, ಕೇಂದ್ರದಿಂದ ೩೧೮ ಲಕ್ಷ ಖರ್ಚು ಮಾಡಬೇಕೆಂದು ಒಟ್ಟು ೧೦ ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ. ಇಷ್ಟು ಹಣವನ್ನು ಕೇಂದ್ರ ಸರ್ಕಾರದವರೇ ಕೊಡುತ್ತಾರೆ. ನೀವು ಕೆಲಸವನ್ನು ಎಕ್ಸಿಕ್ಯೂಟ್ ಮಾಡಬೇಕು ಈ ಕಾರ್ಯವನ್ನು ಪ್ರಾರಂಭ ಮಾಡಿ ಮುಂಗಿಸಿ.ಈ ಒಂದು ಕೆಲಸಕ್ಕೆ ಸಂಬಂಧಪಟ್ಟ ಚೀಫ್ ಇಂಜಿನಿಯರ್ಲ್ಲಿರವರು ಕಾರ್ಯಾಲಯವನ್ನು ಹುಬ್ಬಳ್ಳಿಯಲ್ಲಿ ಏತಕ್ಕೆ ಇಟ್ಟಿದ್ದೀರೋ ಗೊತ್ತಿಲ್ಲ. ಇತರೆ ಇಲಾಖೆಗಳ ೨-೩ಜನ ಚೀಫ್ ಇಂಜಿನಿಯರ್‌ಗಳು ಇದ್ದಾರೆ. ನಿಮಗೆ ಇರತಕ್ಕ ಒಬ್ಬ ಚೀಫ್ ಇಂಜಿನಿಯರನ್ನು ಹುಬ್ಬಳ್ಳಿಯಲ್ಲಿ ಇಟ್ಟಿದ್ದೀರಿ. ಒಂದು ಸಂತೋಷದ ಸಂಗತಿ ಬೆಂಗಳೂರುನಗರಕ್ಕೆ ಹಾಕುವುದಕ್ಕೆ ತೀರ್ಮಾನ ಮಾಡಿದ್ದೀರಿ. ಇವತ್ತು ಈ ಒಂದು ಕಾರ್ಯಾಲಯ ಬೆಂಗಳೂರು ನಗರದಲ್ಲಿರಬೇಕಾದುದು ಸೂಕ್ತ. ಹುಬ್ಬಳ್ಳಿಗೆ ಕೊಡ ಬಾರದು ಎಂದು ನಾನು ಹೇಳುವುದಿಲ್ಲ. ಇಡೀ ರಾಜ್ಯದ ಜನತೆ ಬಂದು ಹೋಗತಕ್ಕಂಥ ಸ್ಥಳ

ಬೆಂಗಳೂರು ಇಲ್ಲಿ ಕಾರ್ಯಾಲಯ ಇದ್ದರೆ ಹೆಚ್ಚಿನ ಕೆಲಸವಾಗುತ್ತದೆ. ಸ್ವಾಮಿ, ತಮಗೆ ತಿಳಿದಂತೆ ಎಲ್ಲಾ ಕಡೆ ಅಡಿಗಲ್ಲುಗಳನ್ನು ಹಾಕಿಕೊಂಡು ಬಂದಿದ್ದಾರೆ. ಕೆಲಸದ ಬಗ್ಗೆ ವಿಚಾರ ಮಾಡಿದರೆ, ಯಾವ ರೀತಿಯು ಕೆಲಸವೂ ಆಗಿಲ್ಲ. ಎಸ್ಟಿಮೇಟ್ ಮಾಡುತ್ತೇವೆ, ಅದನ್ನು ಮಾಡುತ್ತೇವೆ, ಇದನ್ನು ಮಾಡುತ್ತೇವೆಂದು ಹೇಳುತ್ತಾರೆ. ಎಕ್ಸಿಕ್ಯೂಟೀವ್ ಇಂಜಿನಿಯರ್ ಹತ್ತಿರ ಹೋಗಿ ಕೇಳಿದರೆ, ಸೂಪರಿಂಟೆಂಡಿಂಗ್ ಇಂಜಿನಿಯರ್ ಹತ್ತಿರ ಇದೆ ಎಂದು ಹೇಳುತ್ತಾರೆ ಎ.ಆರ್.ಡಬ್ಲ್ಯೂ. ಮಂತ್ರ ಎನ್.ಆರ್.ಡಬ್ಲ್ಯೂ. ಯೋಜನೆಯಲ್ಲಿ ಮಂಜೂರು ಮಾಡಿರತಕ್ಕ ಕೆಲಸಗಳೆಷ್ಟು? ನಿಮಗೆ ಇರತಕ್ಕ ಸಿಬ್ಬಂದಿ ಎಷ್ಟು? ಹಾಲಿ ಮಂಜೂರಾಗಿರತಕ್ಕ ಕೆಲಸಗಳನ್ನು ನೀವು ಮುಗಿಸಬೇಕಾದರೆ ಒಂದು ಪಂಚವಾರ್ಷಿಕ ಯೋಜನೆಯನ್ನೇ ತೆಗೆದುಕೊಳ್ಳಬೇಕಾಗುತ್ತದೆ. ಈ ಕೆಲಸಕ್ಕಾಗಿ ಹೆಚ್ಚಿನ ಹಣವನ್ನು ಇಟ್ಟುಕೊಳ್ಳಬೇಕಾಗುತ್ತದೆ. ನಾನು ಒಂದು ಸಲಹೆ ಕೊಡುತ್ತೇನೆ. ಎಂಟೈರ್ ಇಲಾಖೆಯನ್ನೇ ವಿಕೇಂದ್ರೀಕರಣ ಮಾಡಬೇಕಾಗುತ್ತದೆ. ನಾಲ್ಕೈದು ಜಿಲ್ಲೆಗೆ ಒಬ್ಬ ಎಕ್ಸಿಕ್ಯೂಟೀವ್ ಇಂಜಿನಿಯರ್ ಕೊಟ್ಟರೆ. ಅವನು ಏನು ಕೆಲಸ ಮಾಡುವುದಕ್ಕಾಗುತ್ತದೆ. ಎಸ್ಟಿಮೇಟ್ ಮಾಡುವುದಕ್ಕಾಗುವುದಿಲ್ಲ. ಸ್ಕೂಟಿನಿ ಮಾಡುವುದಕ್ಕಾಗುವುದಿಲ್ಲ. ಯಾವ ಕೆಲಸವನ್ನು ಸರಿಯಾಗಿ ಮಾಡುವುದಕ್ಕಾಗುವುದಿಲ್ಲ. ಈ ಯೋಜನೆಗೆ ಹತ್ತು ಕೋಟಿ ರೂಪಾಯಿ ಏನು ಇಟ್ಟಿದ್ದೀರಿ ಅದು ಸಾಲುವುದಿಲ್ಲ. ಕನಿಷ್ಟ ೨೦-೨೫ ಕೋಟಿ ರೂಪಾಯಿಗಳನ್ನಾದರೂ ಖರ್ಚು ಮಾಡಬೇಕಾಗಿತ್ತು. ಇಷ್ಟು ಹಣವನ್ನು ಕೇಂದ್ರ ಸರ್ಕಾರದಿಂದ ಪಡೆಯುವುದಕ್ಕೆ ಅವಕಾಶ ಇದೆ ಪ್ರತಿಯೊಂದು ತಾಲ್ಲೂಕಿಗೆ ಒಬ್ಬ ಎಕ್ಸಿಕ್ಯೂಟೀವ್ ಇಂಜಿನಿಯರ್, ೨-೩ ಜಿಲ್ಲೆಗಳಿಗೆ ಒಬ್ಬ ಸೂಪರಿಂಟೆಂಡಿಂಗ್ ಇಂಜಿನಿಯರ್, ೨-೩ ತಾಲ್ಲೂಕುಗಳಿಗೆ ಒಬ್ಬ ಆಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್ ಅವರನ್ನು ನೇಮಕ ಮಾಡಿದರೆ ರಾಜ್ಯದಲ್ಲಿ ಜನತೆಗೆ ಕುಡಿಯಲಿಕ್ಕೆ ನೀರನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತದೆ, ಇಲ್ಲದೇ ಹೋದರೆ ಈ ಯೋಜನೆಯಲ್ಲಿ ಕುಂಟಿತವಾಗಿ ಏನು ಗುರಿಯನ್ನು ಮುಟ್ಟಬೇಕೆಂದು ಇದ್ದೀರಿ ಅದನ್ನು ಮುಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಇವತ್ತು ರಾಜ್ಯದಲ್ಲಿ ೩೫,೪೨೦ ಕೊಳವೆ ಬಾವಿಗಳು, ೮೪೨೦ ಪೈಪ್ಡ್ ವಾಟರ್ಸ್ ಒಟ್ಟು ೪೩-೪೫ ಸಾವಿರ ಭಾವಿಗಳಲ್ಲಿ ಎಷ್ಟು ಬಾವಿಗಳ ಹ್ಯಾಂಡ್ಸ್ ಪಂಪ್ ಕೆಲಸ ಮಾಡುತ್ತಿವೆ? ನನಗೆ ತಿಳಿದ ಮಟ್ಟಿಗೆ ಶೇಕಡ ೪೫-೫೦ ರಷ್ಟು ಹ್ಯಾಂಡ್ ಪಂಪುಗಳು ಕೆಲಸ ಮಾಡುತ್ತಿಲ್ಲ. ಇದಕ್ಕೆ ಕಾರಣ, ನಿಮ್ಮಲ್ಲಿ ಮೆಕಾನಿಕ್ಸ್‌ಗಳು ಇಲ್ಲ. ತಾಲ್ಲೂಕಿಗೆ ಒಬ್ಬ ಮೆಕಾನಿಕಲ್ ೨-೩ ಜಿಲ್ಲೆಗೊಬ್ಬ ಎಕ್ಸಿಕ್ಯೂಟೀವ್ ಇಂಜಿನಿಯರ್ ಸಾಕಷ್ಟು ವಾಹನಗಳು ಇಲ್ಲ. ಒಂದು ಬಾವಿಯನ್ನು ತೆಗೆಯಬೇಕಾದರೆ, ೧೦-೨೦ ಸಾವಿರ ರೂಪಾಯಿ ಖರ್ಚಾಗುತ್ತದೆ. ಆ ಬಾವಿ ಉಪಯೋಗವಿಲ್ಲದಂತೆ ಆಗಿ, ಅದರಿಂದ ಜನಗಳಿಗೆ ಅನುಕೂಲ ಇಲ್ಲದೇ ಇದ್ದರೆ ಏನು ಪ್ರಯೋಜನ. ಕೊಳವೆ ಬಾವಿಗಳ ರಿಪೇರಿಗಾಗಿ ದುರಸ್ತಿಗಾಗಿ ವಿಶೇಷ ಸಿಬ್ಬಂದಿಯನ್ನು ತಾಲ್ಲೂಕು ಮಟ್ಟದಲ್ಲಿ ಇಡುವಂತಾದ್ದು ಬಹಳ ಆಗತ್ಯವೆಂದು ಹೇಳುತ್ತೇನೆ. ತಾಲ್ಲೂಕಿಗೆ ೨-೩ ಜನ ಮೆಕಾನಿಕ್ಸ್‌ಗಳನ್ನು ಇಟ್ಟುಕೊಳ್ಳಬೇಕಾಗುತ್ತದೆ. ತಾಲ್ಲೂಕು ಮಟ್ಟದ ಕಛೇರಿಗಳಲ್ಲಿರತಕ್ಕ ವಾಹನಗಳನ್ನು ಬಳಸಿಕೊಳ್ಳಬಹುದೆಂದು ಸರ್ಕಾರದವರು ಆಜ್ಞೆ ಹೊರಡಿಸಿದ್ದಾರೆ. ಆದರೂ ಕೂಡ ಕೆಲಸ ಮಾಡುವುದಕ್ಕೆ ಆಗುತ್ತಿಲ್ಲ. ಆದುದರಿಂದ ತಾಲ್ಲೂಕು ಮಟ್ಟದಲ್ಲಿ ಹೆಚ್ಚಿನ ಸಿಬ್ಬಂದಿಯನ್ನು ಮಾಡುವಂತಾದ್ದು ಆಗತ್ಯವೆಂದು ಹೇಳುತ್ತೇನೆ.

ಸ್ವಾಮಿ, ಪಂಚಾಯತ್ ರಾಜ್ಯ ಸಂಸ್ಥೆಗಳ ಬಗ್ಗೆ ಮಾನ್ಯ ಪ್ರಭಾಕರ್‌ರವರು ಮಾತನಾಡಿದ್ದಾರೆ. ಪಂಚಾಯಿತಿಗಳು ಹೇಗೆ ಕೆಲಸ ಮಾಡುತ್ತಿವೆ? ಜಿಲ್ಲಾ ಬೋರ್ಡುಗಳು ಹೇಗೆ ಕೆಲಸ ಮಾಡುತ್ತಿವೆ? ಎನ್ನುವ ಬಗ್ಗೆ ಅವರು ಹೇಳಿದ್ದಾರೆ. ೨-೩ ಸಾರಿ ಪಂಚಾಯತ್ ರಾಜ್ ಸಮ್ಮೇಳನಗಳನ್ನು ಕರೆದು ನಿರ್ಣಯಗಳನ್ನು ಕೂಡ ತಾವು ಮಾಡಿದ್ದೀರಿ. ವಿಕೇಂದ್ರೀಕರಣ ಮಾಡಬೇಕೆನ್ನುವ ಅಂಶವನ್ನು ಆ ಸಮ್ಮೇಳನಗಳಲ್ಲಿ ಒತ್ತಿ ಹೇಳಿದ್ದೀರಿ. ನಾವು ಕೂಡ ಅದನ್ನು ಪುಷ್ಟೀಕರಿಸಿದ್ದೇವೆ. ಆದರೆ, ಈ ದಿಸೆಯಲ್ಲಿ ಏನೂ ಪ್ರಗತಿ ಆಗಿಲ್ಲ. ವಿಕೇಂದ್ರೀಕರಣದ ಕೆಲಸ ಎಷ್ಟರಮಟ್ಟಿಗೆ ಆಗಿದೆ ಎನ್ನುವುದನ್ನು ನೋಡಬೇಕಾಗಿದೆ. ಕೇಂದ್ರೀಕರಣದಿಂದ ವಿಕೇಂದ್ರೀಕರಣವನ್ನು ಮಾಡಿ, ಪಂಚಾಯ್ತಿ ತಾಲ್ಲೂಕು ಮಟ್ಟದಲ್ಲಿ ಕೆಲಸ ಮಾಡತಕ್ಕ ಮಂಡಲಿಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಡುವುದಕ್ಕೆ ತಾವು ಆಲೋಚನೆ ಮಾಡಬೇಕು. ಇವತ್ತು ಪಂಚಾಯ್ತಿಗಳ ಅವಸ್ಥೆ ಏನಾಗಿದೆ? ವಸೂಲಾತಿ ಕ್ರಮ ನೋಡಿ. ತಮ್ಮ ವರದಿ ಪ್ರಕಾರ ಈ ವರ್ಷ ರಾಜ್ಯದಲ್ಲಿ ೧೯೫ ಲಕ್ಷ ರೂಪಾಯಿಗಳ ಬಾಕಿ ಪಂಚಾಯ್ತಿಗಳದ್ದು ಇದೆ. ತಾವು ವಸೂಲು ಮಾಡಿರತಕ್ಕಂಥಾದ್ದು ೧೪,೨೧,೦೦೦ ರೂಪಾಯಿಗಳು. ಇದನ್ನು ನೋಡಿದರೆ ತಾವೇ ಅರ್ಥ ಮಾಡಿಕೊಳ್ಳಬಹುದು. ಎಷ್ಟರಮಟ್ಟಿಗೆ ಪಂಚಾಯ್ತಿಗಳು ಕೆಲಸ ಮಾಡುತ್ತಿವೆ ಎಂಬುದನ್ನು ಪಂಚಾಯಿತಿಗಳು ಸತ್ವಪೂರ್ಣವಾಗಿ ಕೆಲಸ ಮಾಡಬೇಕಾದರೇ, ಪಂಚಾಯ್ತಿ ಕಾರ್ಯದರ್ಶಿಗಳು ಗ್ರಾಮ

ದಲ್ಲಿ ಇರಬೇಕು. ಪಂಚಾಯ್ತಿಗಳ ಕೆಲಸವನ್ನು ರೆವಿನ್ಯೂ ಸೆಕ್ರೆಟರಿಗೆ ವಹಿಸಿದರೆ ಕಲೆಕ್ಷನ್ ಆಗಂತ್ತದೆಯೆ? ಪಂಚಾಯ್ತಿಯವರು ೧೦,೦೦೦ ಕಲೆಕ್ಟ್ ಮಾಡಿದರೆ, ಸರ್ಕಾರದಿಂದ ಹತ್ತು ಸಾವಿರ ರೂಪಾಯಿಗಳ ಮ್ಯಾಚಿಂಗ್ ಗ್ರಾಂಟ್ ಕೊಡುತ್ತೀರಿ. ಇದಕ್ಕಾಗಿ ಒಂದುಕೋಟಿ ರೂಪಾಯಿ ಬಡ್ಜೆಟ್ಟಿನಲ್ಲಿಟ್ಟಿದ್ದೀರಿ. ಖರ್ಚಾಗಿರತಕ್ಕಂಥ ಹಣ ಎಷ್ಟು? ಬಹುಶಃ ೧೪ ಲಕ್ಷ ಪಂಚಾಯ್ತಿಗಳು ವಸೂಲು ಮಾಡಿದ್ದು ೧೪ ಲಕ್ಷ ರೂಪಾಯಿಗಳನ್ನು ಸರ್ಕಾರದಿಂದ ಕೊಟ್ಟಿದ್ದೀರಿ, ಇನ್ನು ೮೬ ಲಕ್ಷ ರೂಪಾಯಿ ಲ್ಯಾಪ್ಸ್ ಆಗಿ ಹೋಯಿತು. ಪರಿಸ್ಥಿತಿ ಹೀಗಿರುವಾಗ ಪಂಚಾಯ್ತಿಗಳನ್ನು ಹೇಗೆ ಚುರುಕುಗೊಳಿಸುವುದಕ್ಕೆ ಸಾಧ್ಯ? ಪಂಚಾಯ್ತಿ ರಾಜ್ಯಗಳಿಗೆ ಪ್ರತ್ಯೇಕವಾಗಿ ಕಾರ್ಯದರ್ಶಿಗಳನ್ನು ನೇಮಿಸತಕ್ಕಂಥಾದ್ದು ತುಂಬ ಅಗತ್ಯ ಇದೆ. ಇಲ್ಲದೇ ಹೋದರೆ ರೆವಿನ್ಯೂ ಕಾರ್ಯದರ್ಶಿಗಳನ್ನು ಕೆಲಸ ಮಾಡುವ ಹಾಗೆ ಮಾಡಿ, ಪಂಚಾಯ್ತಿಗಳು ಇರತಕ್ಕ ಪ್ರದೇಶದಲ್ಲಿಯೇ ವಾಸ ಮಾಡುವಂತ ವ್ಯವಸ್ಥೆ ಮಾಡಿಸಿ. ತಾವು ರಾಜ್ಯದಲ್ಲಿರತಕ್ಕ ಪಂಚಾಯ್ತಿಗಳಿಗೆ ೧೪ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ತಾವು ಕೊಟ್ಟಂತ ಹಣ ಒಂದು ವರ್ಷದ ವಿದ್ಯುಚ್ಛಕ್ತಿ ಬಾಕಿ ಏನಿದೆ ಅದನ್ನು ಕೂಡ ಕಟ್ಟುವುದಕ್ಕಾಗುವುದಿಲ್ಲ. ಸ್ವಾಮಿ ಪೈಪ್ಡ್ ವಾಟರ್ ಸಪ್ಲೈ ವ್ಯವಸ್ಥೆಯನ್ನು ಗ್ರಾಮಗಳಿಗೆ ಮಾಡಿಕೊಟ್ಟಿದ್ದೀರಿ. ಅವುಗಳು ಕೆಟ್ಟು ಹೋದರೆ ದುರಸ್ತಿ ಮಾಡುವಂತ ಅಧಿಕಾರವನ್ನು ಪಂಚಾಯ್ತಿಗಳಿಗೆ ಕೊಡಿ. ಕೊಂಡಜ್ಜಿ ಬಸಪ್ಪ ಸಮಿತಿಯವರು, ಅಶೋಕ ಮೆಹತಾ ಸಮಿತಿಯವರು ಪಂಚಾಯ್ತಿಗಳಿಗೆ ಹೆಚ್ಚಿನ ವರಮಾನವನ್ನು ಕೊಟ್ಟು, ಹೆಚ್ಚಿನ ಅಧಿಕಾರ ಕೊಡಿ ಎಂದು ಹೇಳಿದರು. ಇವತ್ತು ಪಂಚಾಯ್ತಿಗಳಿಗೆ ಲೈಸೆನ್ಸ್ ಕೊಡತಕ್ಕಂಥ ಅಧಿಕಾರ ಇಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಮನೆಕಟ್ಟತಕ್ಕವರಿಗೆ ತೊಂದರೆ ಕೊಡುವಂತ ಕೆಲಸವಾಗಿದೆಯೇ ಹೊರತು, ಲೈಸೆನ್ಸ್ ಕೊಡುವಂತ ಅನುಕೂಲ ಇಲ್ಲ. ಅಸಿಸ್ಟೆಂಟ್ ಕಮೀಷನರ್‌ರವರಿಗೆ ಅಧಿಕಾರ ಕೊಟ್ಟಿದ್ದೀರಿ. ಅನೇಕ ಪಂಚಾಯ್ತಿಗಳಲ್ಲಿ ವ್ಯವಸ್ಥೆ ಸರಿಯಾಗಿಲ್ಲದೇ ಇರುವುದರಿಂದಲೂ, ಸಂಬಂಧಪಟ್ಟ ಕಾರ್ಯದರ್ಶಿ ಸ್ಥಳದಲ್ಲಿ ವಾಸ ಮಾಡದೇ ಇರುವುದರಿಂದಲೂ ಶಕ್ತಿಯುತವಾಗಿ ಕೆಲಸ ಮಾಡುವುದಕ್ಕಾಗುತ್ತಿಲ್ಲ. ಡೀಸೆಂಟ್ರಲೈಜೇಷನ್ ಆಫ್ ಪವರ್‌ನ್ನು ಪಂಚಾಯ್ತಿಗಳಿಗೆ ಕೊಡಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಸಂಘಟಿತ ಗ್ರಾಮಾಭಿವೃದ್ಧಿ ಯೋಜನೆ ಹಾಗೂ ರಾಷ್ಟ್ರೀಯ ಗ್ರಾಮೀಣ ಯೋಜನೆ ಬಗ್ಗೆ ಕೆಲವು ಮಾತುಗಳನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಸಂಘಟಿತ ಗ್ರಾಮಾಭಿವೃದ್ಧಿ ಯೋಜನೆ ಬಹುಶಃ ತಾಲ್ಲೂಕ್ ಮಟ್ಟದಲ್ಲಿ ತಾಲ್ಲೂಕ್ ಬೋರ್ಡ್ ಮತಿಯಿಂದ ಅಥವಾ ಅವರ ಸಲಹೆಮೇಲೆ ನಡೆಯಬೇಕೆಂದು ತಾವು ಅಧಿಕಾರಿಗಳನ್ನು ನೇಮಿಸಿದ್ದೀರಿ. ಹಣ ಕೊಟ್ಟಿದ್ದೀರಿ ಕೆಲವು ಆಕರ್ಷಕ ಯೋಜನೆಗಳು ಇವೆ, ಆದರೆ ಈ ಯೋಜನೆಗಳ ಆಕರ್ಷಕ ಎಷ್ಟರಮಟ್ಟಿಗಿದೆ ಎಂದರೆ ಹೆಸರಿನಲ್ಲಿ ಮಾತ್ರ ಆಕರ್ಷಕ ಏನು ಕೆಲಸ ಮಾಡಿವೆ ಎಂದು ನೋಡಿದ ಪಕ್ಷದಲ್ಲಿ ಈ ಯೋಜನೆಗಳಲ್ಲಿ ದೋಷ ಇರಬೇಕು, ಅಥವಾ ಯೋಜನೆಗಳನ್ನು ಇಂಪ್ಲಿಮೆಂಟ್ ಮಾಡತಕ್ಕಂಥ ಅಧಿಕಾರಿಗಳಲ್ಲಿ ದೋಷ ಇರಬೇಕು, ಡ್ರಾಟ್ ಪ್ರೋನ್ ಏರಿಯಾಸ್ ಪ್ರೋಗ್ರಾಂ ಇಂಟಿಗ್ರೇಟೆಡ್ ರೂರಲ್ ಡೆವಲಪ್‌ಮೆಂಟ್ ಪ್ರೋಗ್ರಾಂ, ಟ್ರೈನಿಂಗ್ ಆಫ್ ರೂರಲ್ ಯೂತ್ ಫಾರ್ ಸೆಲ್ಫ್ ಎಂಪ್ಲಾಯಿಮೆಂಟ್ ನ್ಯಾಷನಲ್ ರೂರಲ್ ಎಂಪ್ಲಾಯಿಮೆಂಟ್ ಪ್ರೋಗ್ರಾಂ, ಒಂದೊಂದು ಯೋಜನೆ ಮಾಡುವುದಾದರೆ ಇಪ್ಪತ್ತು ಹಳ್ಳಿಗಳಲ್ಲಿ ವಾಸ ಮಾಡತಕ್ಕ ಒಬ್ಬರ ಜನಜೀವನ ಏನು ಇದೆ ಇದನ್ನು ಉದ್ಧಾರ ಮಾಡಬೇಕೆಂದು ಸರ್ಕಾರದ ಉದ್ದೇಶ ಇದೆ. ಹಣವನ್ನು ಪ್ರೊವೈಡ್ ಮಾಡಿದ್ದೀರಿ, ಎಷ್ಟು ಖರ್ಚಾಗಿದೆ. ಕ್ಷಾಮ ಪೀಡಿತ ಪ್ರದೇಶಗಳ ಕಾರ್ಯಕ್ರಮ ಇಡೀ ರಾಜ್ಯದಲ್ಲಿ ವ್ಯಾಪ್ತಿಯಲ್ಲಿ ಇಲ್ಲದಿದ್ದರೂ ಕೂಡ ೪೦ ತಾಲ್ಲೂಕುಗಳಲ್ಲಿ ಇದನ್ನು ತಾವು ಕೊಟ್ಟಿದ್ದೀರಿ. ೧೯೭೪–೭೫ರಿಂದ ೧೯೮೦–೮೧ರ ವರೆಗೆ ಸರ್ಕಾರ ಮಂಜೂರು ಮಾಡಿದಂಥ ಹಣ ೩,೩೨೧ ಲಕ್ಷ ರೂಪಾಯಿ ಖರ್ಚು ೨,೭೫೦ ಲಕ್ಷ ರೂಪಾಯಿ, ಇದು ಏತಕ್ಕೆ ಸ್ವಾಮಿ ೬ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಿಲ್ಲ ಅಂದರೆ, ಏನು ಅಲ್ಲಿ ಕ್ಷಾಮ ಇಲ್ಲ ಅಂಥ ಅರ್ಥ ಏನು ಕೆಲಸ ಮಾಡತಕ್ಕ ಜನ ಇಲ್ಲ ಅಂಥ ಅರ್ಥವೇನು? ಅಧಿಕಾರಿಗಳಿಗೆ ಹಣ ಖರ್ಚು ಮಾಡುವ ಯೋಗ್ಯತೆ ಇಲ್ಲ ಅಂಥ ಅರ್ಥವೇನು? ಇದು ಯಾವ ಅರ್ಥ ಕೊಡುತ್ತದೆ ೧೯೭೯–೮೦ ೮೮೬ ಲಕ್ಷ ರೂಪಾಯಿ ನೀವು ಮಂಜೂರು ಮಾಡಿದರೆ ೭೮೩ ಲಕ್ಷ ರೂಪಾಯಿ ಖರ್ಚಾಗಿದೆ. ೧೯೮೧–೮೨ರಲ್ಲಿ ೯೯೮ ಲಕ್ಷ ರೂಪಾಯಿ ಸರ್ಕಾರ ಮಂಜೂರು ಮಾಡಿದರೆ ೭೧೫ ಲಕ್ಷ ರೂಪಾಯಿ ಖರ್ಚಾಗಿದೆ. ೧೯೮೨-೮೩ಕ್ಕೆ ಬಹುಶಃ ೧,೦೧೦ ಲಕ್ಷ ರೂಪಾಯಿ ತಾವು ಪ್ರೊವೈಡ್ ಮಾಡುತ್ತಿದ್ದೀರಿ, ಇವರು ಖರ್ಚು ಮಾಡುತ್ತಾರೆ ಎನ್ನುವ ನಂಬಿಕೆ ಇಲ್ಲ. ಖರ್ಚು ಮಾಡದೇ ಇರುವುದಕ್ಕೆ ಯಾವುದು ಯೋಜನೆ ಮಾಡಿಕೊಟ್ಟಿದ್ದೀರಿ ಅಂದರೆ ಡಿಸ್ಟ್ರಿಕ್ಟ್ ರೂರಲ್ ಡೆವಲಪ್‌ಮೆಂಟ್ ಸೊಸೈಟಿ, ಏನು ಹಣ ಖರ್ಚಾಗದೇ ಇದ್ದರೂ ಅದರಲ್ಲಿ ಇಟ್ಟುಬಿಡಿ ಅಂಥ ಮಾಡಿದ್ದೀರಿ, ಯಾವ ಯೋಜನೆ ಆಗಲಿಲ್ಲ ಹಣ ತೆಗೆದು ಅದರಲ್ಲಿ ಇಡಿ. ಅದು ಲ್ಯಾಪ್ಸ್ ಆಗುವುದಿಲ್ಲ,

ಖರ್ಚು ಆಗುವುದಿಲ್ಲ, ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಕ್ಕೆ ಕೇಂದ್ರದವರು ೧,೪೫೦ ಲಕ್ಷ ರೂಪಾಯಿ ಮಂಜೂರು ಮಾಡಿದರೆ ಖರ್ಚು ಮಾಡಿರತಕ್ಕದ್ದು ೬೯೩ ಲಕ್ಷ ರೂಪಾಯಿ, ಇದು ತಮ್ಮ ರಿಪೋರ್ಟ್‌ನಲ್ಲಿಯೇ ಇದೆ. ಇದರಲ್ಲಿ ಬಹಳ ಚೆನ್ನಾಗಿ ಹೇಳಿದ್ದಾರೆ, ತಮ್ಮ ರಿಪೋರ್ಟ್ ನೋಡಿ. ರಾಜ್ಯಮಟ್ಟದಿಂದ ನಮ್ಮ ಸ್ಟೇಟ್ ಸೆಕ್ಟಾರ್ ೭೦೭ ಲಕ್ಷ ರೂಪಾಯಿ ಮಂಜೂರು ಮಾಡಿದರೆ ೩೩೦ ಲಕ್ಷ ರೂಪಾಯಿ ಖರ್ಚಾಗಿದೆ. ಲೆಸ್‌ದ್ಯಾನ್ ೫೦ ಪರ್‌ಸೆಂಟ್. ೧೯೮೦-೮೧ ರಲ್ಲಿ ೫೮೬ ಲಕ್ಷ ರೂಪಾಯಿ ಮಂಜೂರು ಮಾಡಿದರೆ ೯೭ ಲಕ್ಷ ರೂಪಾಯಿ ಖರ್ಚು ಮಾಡಿದ್ದೀರಿ. ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು ಅಂದರೆ ನಮ್ಮ ಗ್ರಾಮಗಳಿಲ್ಲಾ ಅಭಿವೃದ್ಧಿಯಾಗಿವೆ ಏನು? ಹಣ ಖರ್ಚು ಮಾಡಲಿಕ್ಕೆ ಆದಕ್ಕೆ ಪ್ರಾವಿಜನ್ ಇಲ್ಲ ಅಂಥ ಏನು? ಏತಕ್ಕೆ ಹಣ ಖರ್ಚು ಮಾಡಿಲ್ಲ.

ಶ್ರೀ ಬೇಗಾನೆ ರಾಮಯ್ಯ.—ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳುವಾಗ ಇದರಲ್ಲಿ ಏನೂ ಕೆಲಸ ಆಗಿಲ್ಲ ಎನ್ನುವ ಭಾವನೆ ಬರುತ್ತಿದೆ. ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಏನಿದೆ ಇದು ಸಂಪೂರ್ಣವಾಗಿ ಬ್ಯಾಂಕ್ ಸಹಕಾರವನ್ನು ಅವಲಂಬಿಸಿಕೊಂಡಿರತಕ್ಕಂತಾದ್ದು, ಆಚೆ ವರ್ಷ ಒಂದು ತಾಲ್ಲೂಕಿಗೆ ೫ ಲಕ್ಷ ರೂಪಾಯಿಯಂತೆ ಸಬ್ಸಿಡಿ ಹಂಚಲಿಕ್ಕೆ ಕೊಟ್ಟಿದ್ದರು. ಹೋದ ವರ್ಷ ೬ ಲಕ್ಷ, ಇನ್ನು ಬರುವ ವರ್ಷಗಳಲ್ಲಿ ೮-೯ ಲಕ್ಷ ರೂಪಾಯಿಗಳು ಬರುತ್ತದೆ. ದುಡ್ಡು ಲ್ಯಾಪ್ಸ್ ಆಗಿಲ್ಲ. ಡಿ ಆರ್.ಡಿ.ಎಸ್.ನಲ್ಲಿ ಇಟ್ಟುಕೊಂಡಿದ್ದೇವೆ. ೫ನೇ ತಾರೀಖಿನ ದಿವಸ ಮುಖ್ಯಮಂತ್ರಿಗಳ ಜೊತೆಯಲ್ಲಿ ಕೇಂದ್ರದ ಹಣಕಾಸು ಮಂತ್ರಿಗಳನ್ನು ಸಹ ಕರೆಸುತ್ತಿದ್ದೇವೆ. ನಮ್ಮ ಲೀಡ್ ಬ್ಯಾಂಕಿನ ಅಧ್ಯಕ್ಷರನ್ನು ಕರೆಸುತ್ತಿದ್ದೇವೆ. ಆದರ ಬಗ್ಗೆ ಅವರು ನಮಗೆ ಸಾಲ ಕೊಡುವವರೆಗೂ ನಮ್ಮ ದುಡ್ಡು ಕೊಡುವಹಾಗೆ ಇಲ್ಲ. ನಾವು ಸರ್ಕಾರದಿಂದ ಹಣ ಡಿ.ಆರ್.ಡಿ.ಸಿ.ಗೆ ಕೊಟ್ಟಿದ್ದೇವೆ. ಅವರು ಬ್ಯಾಂಕಿಗೆ ಕೊಟ್ಟಿದ್ದಾರೆ ಬ್ಯಾಂಕಿನವರು ಇವೊತ್ತು ಪ್ರಯೋಜನದಾರರಿಗೆ ಪ್ರತಿಯೊಂದು ತಾಲ್ಲೂಕಿನಲ್ಲೂ ೬೦೦ ಕುಟುಂಬಗಳನ್ನು ಗುರುತಿಸಿ ಅತಿಬಡವರು, ಕಡುಬಡವರು, ಏನಿದ್ದಾರೆ ಅವರನ್ನು ಗುರುತಿಸಿ ಕೃಷಿ ಕಾರ್ಮಿಕರಿಗೆ ಕುಶಲಕರ್ಮಿಗಳಿಗೆ ಸಣ್ಣ ರೈತರಿಗೆ ಅತಿಸಣ್ಣ ರೈತರಿಗೆ ಕೊಡಲಾಗಿದೆ. ಬ್ಯಾಂಕಿನವರು ಎಲ್ಲಿಯವರೆಗೆ ನಮಗೆ ಸಹಕಾರ ಕೊಡುವುದಿಲ್ಲ ಅಲ್ಲಿಯವರೆಗೆ ನಮಗೆ ಸಬ್ಸಿಡಿ ಹಣ ಖರ್ಚಾಗುವುದಿಲ್ಲ. ಆ ದೃಷ್ಟಿಯಿಂದ ಖರ್ಚಾಗದೆ ಉಳಿದಿದೆ. ನಾವು ಸಹ ತೀರ್ವಗತಿಯಿಂದ ೫ನೇ ತಾರೀಖು ಮೀಟಿಂಗ್ ಕರೆದಿದ್ದೇವೆ.

ಶ್ರೀ ಎಂ. ಸಿ. ಬಸಪ್ಪ.—ಸರ್ಕಾರದ ಮಟ್ಟದಲ್ಲಿ ಬ್ಯಾಂಕಿನವರನ್ನು ಕರೆಯಬಹುದು, ತಾವು ಅಧಿಕಾರಿಗಳನ್ನು ಕರೆಯಬಹುದು ಮೀಟಿಂಗ್ ಮಾಡಬಹುದು. ನಾವು ಮಾಡತಕ್ಕಂಥ ಯೋಜನೆಗಳು ತಾಲ್ಲೂಕು ಮಟ್ಟದಲ್ಲಿ, ಹಳ್ಳಿಮಟ್ಟದಲ್ಲಿ ಹೇಗೆ ಇಂಪ್ಲಿಮೆಂಟ್ ಆಗಿದೆ. ತಾವು ಇಲ್ಲಿ ಪ್ರೊಗ್ರೆಸ್ ರಿಪೋರ್ಟ್ ವಿಧಾನ ಸೌಧದಲ್ಲಿ ಬರೆದು ಇಟ್ಟುಕೊಂಡರೆ ಹಳ್ಳಿಗಳು ಉದ್ಧಾರವಾಗುವುದಿಲ್ಲ. ಇವೊತ್ತು ೬೦೦ ಕುಟುಂಬಗಳು ಪಾವರ್ಟಿಲೈಟ್‌ನಿಂದ ಕೆಳಗೆ ಇರತಕ್ಕಂಥವರನ್ನು ಮೇಲೆ ತರಲಿಕ್ಕೆ ಉದ್ಯೋಗ ಕಲ್ಪನೆ ಮಾಡಿಕೊಡಬೇಕಾದು ತಾವು ಈ ಒಂದು ಪ್ರೊಗ್ರಾಮ್ ಇಟ್ಟುಕೊಂಡು ಹಳ್ಳಿಗಳನ್ನು ಸೆಲೆಕ್ಟ್ ಮಾಡಿ ಇವೊತ್ತು ಅವರಿಗೆ ಏನು ಸಲಕರಣೆಗಳನ್ನು ಒದಗಿಸಿದ್ದೀರಿ. ಒಂದು ವರ್ಷ ವಾಚ್ ಮಾಡಿ ಎಷ್ಟು ಜನ ಪಾವರ್ಟಿ ಲೈನ್‌ನಿಂದ ಮೇಲೆ ಬಂದಿದ್ದಾರೆ. ಮಾನ್ಯ ಪ್ರಭಾಕರ್ ಅವರು ಬಹಳ ಗುಟ್ಟಾಗಿ ಹೇಳಿದರು ಈ ಹಣ ಅವರಿಗೆ ನೇರವಾಗಿ ಮುಟ್ಟುತ್ತದೆಯೇ ಎಂದು. ಮಾನ್ಯ ಶ್ರೀಕಂಠಯ್ಯನವರು ಬಂದು ನಮ್ಮ ತಾಲ್ಲೂಕಿನಲ್ಲಿ ಒಂದು ಪಾಸ್‌ಬುಕ್ ಕೊಟ್ಟರು. ಇವರುನೇರವಾಗಿ ಹಣ ಕೊಡುವುದಿಲ್ಲ ೪ ಸಾವಿರ ರೂಪಾಯಿ ಮಂಜೂರು ಆದರೆ ೪ ಸಾವಿರ ರೂಪಾಯಿಗೆ ಪಾಸ್‌ಬುಕ್ ಕೊಡುತ್ತಾರೆ. ಅವನು ಆದರಲ್ಲಿ ಎತ್ತು, ಗಾಡಿ, ಹಸುಗಳು, ಕುರಿ ತೆಗೆದುಕೊಳ್ಳುತ್ತಾನೆ. ನಿಮ್ಮ ಯೋಜನೆ ಪ್ರಕಾರ ಯಾವುದು ಇದೆ ಅದನ್ನು ಅವನು ಕೊಂಡುಕೊಂಡು ಓಚರ್ ಕೊಟ್ಟ ೪ ಸಾವಿರ ರೂಪಾಯಿ ಪಡೆಯಂ ಬೇಕಾಗುತ್ತದೆ. ನಿಮ್ಮ ಅಧಿಕಾರಿಗಳಿಂದ ಇದರ ಬಗ್ಗೆ ನಿಜವಾಗಿಯು ಉಪಯೋಗವಾಗುತ್ತದೆಯೇ ಅದನ್ನು ನೋಡಿದ್ದೀರಾ ತಮ್ಮ ಐಎಎಸ್ ಆಫೀಸರ್ಸ್ ಎಲ್ಲಾ ಕೆಲಸಕ್ಕೂ ಲಾಯಕ್ಕಾದರ್ ಜನ ಅದನ್ನು ಒಪ್ಪಿಕೊಳ್ಳುತ್ತೇನೆ, ಇವೊತ್ತು ನೀವು ರೂರಲ್ ಡೆವಲಪ್‌ಮೆಂಟ್ ಸಪರೇಟ್ ಕೇಡರ್ ಮಾಡಿದರೆ ಒಳ್ಳೆಯದು ಅಂಥ ಹೇಳುತ್ತೇನೆ. ಇದು ನಡೆಸಲಿಕ್ಕೆ ದಕ್ಷ ಅಧಿಕಾರಿಗಳು ಇರಬಹುದು. ರೂರಲ್ ಡೆವಲಪ್‌ಮೆಂಟ್ ಏನಿದೆ ಇಟ್ ಈಸ್ ಟಿಕ್ನಿಕ್ ಹಳ್ಳಿಗಳಲ್ಲಿರತಕ್ಕ ಬಡವನ ಸಮಸ್ಯೆಯನ್ನು ಅರ್ಥ ಮಾಡಿಕೊಂಡು ಹೇಗೆ ಪರಿಹಾರ ಮಾಡಬೇಕೆಂದು ಹುಡುಕಿ ಕೆಲಸ ಮಾಡಬೇಕೆ ಹೊರತು ಇಲ್ಲಿ ಮಸೂರಿಯಲ್ಲಿನ ಟ್ರೈನಿಂಗ್ ಇನ್‌ಸ್ಟಿಟ್ಯೂಟ್‌ನಿಂದ ಬಂದಂಥ ಮನುಷ್ಯ ಹಳ್ಳಿಗಾಡಿನಲ್ಲಿರತಕ್ಕವರ ಕಷ್ಟವನ್ನು

ಅರಿತುಕೊಳ್ಳಲಿಕ್ಕೆ ಸಾಧ್ಯವಿಲ್ಲ. ನಿಮ್ಮ ಡಿಆರ್‌ಡಿಎಸ್ ಎಷ್ಟರಮಟ್ಟಿಗೆ ಫಲಪ್ರಧವಾಗಿರುತ್ತಿದೆ ಯಾವೊತ್ತು ಇಂಪ್ಲಿಮೆಂಟ್ ಮಾಡತಕ್ಕ ಅಧಿಕಾರಿ ತನ್ನ ಜವಾದ್ದಾರಿ ಹಳ್ಳಿಗರ ಕಷ್ಟ ತಿಳಿದುಕೊಂಡು ಅದಕ್ಕೆ ಸರಿಯಾದ ಪರಿಹಾರ ಹುಡುಕುತ್ತಾನೆ ಆಗ ಸಾಧ್ಯ, ಇಲ್ಲದಿದ್ದರೆ ಇದು ಆಗುವುದಿಲ್ಲ. ನಾವು ರಿಪೋರ್ಟ್‌ನಲ್ಲಿ ಮಾಡಬಹುದು 'ವಿಧಾನ ಸೌಧದಲ್ಲಿ ಮೀಟಿಂಗ್ಸ್ ಮಾಡಬಹುದು' ನಾವು ಅಭಿವೃದ್ಧಿ ಸಾಧನೆ ಮಾಡಿದ್ದೇವೆ ಎಂದ ರಿಪೋರ್ಟ್‌ನಲ್ಲಿ ಹೇಳಬಹುದು ಅಷ್ಟೇ ಇನ್ನು ಟ್ರೈನಿಂಗ್ ಬಗ್ಗೆ ಹೇಳಬೇಕೆಂದರೆ, ಸುಮಾರು ೨ ಸಾವಿರ ಚಿಲ್ಲರೆ ಜನರಿಗೆ ಟ್ರೈನಿಂಗ್ ಕೊಡುತ್ತಿದ್ದೀರಿ ಇವೊತ್ತು ಎಷ್ಟು ಜನ ಸ್ವಯಂ ಉದ್ಯೋಗ ಮಾಡುತ್ತಿದ್ದಾರೆ, ೨೨೦ ಜನ ಮಾಡುತ್ತಿದ್ದಾರೆ, ಬೇರೆಯವರು ಏನು ಮಾಡುತ್ತಿದ್ದಾರೆ ಇದನ್ನು ನೋಡಿದರೆ ೧೦ ಪರ್‌ಸೆಂಟ್‌ಗಿಂತಲೂ ಕಡಿಮೆಯಾಗುತ್ತದೆ. ತಮ್ಮ ಯೋಜನೆಯಲ್ಲಿ ಹಣ ಖರ್ಚು ಮಾಡಿದ್ದೀರಿ, ಅವನು ಸ್ವಯಂ ಉದ್ಯೋಗ ಮಾಡಬೇಕು ಎನ್ನುವ ದೃಷ್ಟಿಯಿಂದ ಅವನಿಗೆ ಸಹಾಯ ಕೊಟ್ಟಿದ್ದೀರಿ. ಟ್ರೈನಿಂಗ್ ಕೊಟ್ಟಿದ್ದೀರಿ, ಸ್ವಯಂ ಉದ್ಯೋಗ ಕಲ್ಪನೆ ಮಾಡುವುದಕ್ಕೆ ಜನ ೨,೭೦೦ ಜನ ಅದರೆ ೨೨೦ ಜನ ಉದ್ಯೋಗದಲ್ಲಿದ್ದಾರೆ ಬಾಕಿಯವರ ಗತಿ ಏನು ಅವರ ಕಷ್ಟ ವಿಚಾರಿಸಿದ್ದೀರಾ ? ಇವೊತ್ತು ನೀವು ಅವರಿಗೆ ಸ್ವಯಂ ಉದ್ಯೋಗ ಮಾಡಬೇಕೆಂದು ಟ್ರೈನಿಂಗ್‌ಕೆ ಕಳಿಸಿದ್ದೀರಿ. ನಿನಗೆ ಏನು ಕಷ್ಟ ಇದೆ ನಿನಗೆ ಬಂಡವಾಳ ಬೇಕೆ, ರಾಮೆಟೀರಿಯಲ್ಸ್ ಬೇಕೆ, ಮಾರ್ಕೆಟಿಂಗ್ ಪೆಸಿಲಿಟೀಸ್ ಬೇಕೆ, ನಿನಗೆ ಏನು ತೊಂದರೆ ಇದೆ ಅಂಥ ತಾವು ಇನ್‌ವೆಸ್ಟಿಗೇಟ್ ಮಾಡಿದ್ದೀರಾ.

ಶ್ರೀ ಬೇಗಾನೆ ರಾಮಯ್ಯ,—ಸ್ವಯಂ ಉದ್ಯೋಗ ಆವಲಂಬನೆ ಮಾಡತಕ್ಕ ಜನಗಳಿಗೆ ನಾವು ಕರೆದುಕೊಂಡುಬಂದು ೧೦೦ ರೂಪಾಯಿ ಸ್ಟೈಫಂಡು ಕೊಟ್ಟು ಆಲ್ಲಿರತಕ್ಕ ಹೆಣ್ಣುಮಕ್ಕಳು, ಯುವಕರ ರನ್ನು ಕರೆದುಕೊಂಡುಬಂದು ಅವರಿಗೆ ಕಾರ್ಪೆಂಟರಿ, ಸ್ಮಿತಿ ಟೈಲರಿಂಗ್ ಟ್ರೈನಿಂಗ್ ಕೊಡುತ್ತಿದ್ದೇವೆ. ಅವರು ಟ್ರೈನಿಂಗ್ ಪಡೆದುಕೊಂಡನಂತರ ಮುಂದೆ ಬಂದು ಸಾಲ ಕೊಡಿಸಿ ಅಂದರೆ, ಡಿಆರ್‌ಡಿಸಿ ಯೋಜನೆ ಮುಖಾಂತರ ಅವನಿಗೆ ಸಾಲ ಕೊಡುವ ವ್ಯವಸ್ಥೆ ಮಾಡುತ್ತಿದ್ದೇವೆ. ಬಹಳ ಜನ ಆಸಕ್ತಿ ವಹಿಸಿ ಮುಂದೆ ಬಂದಿಲ್ಲ ಅವರು ಆಸಕ್ತಿ ವಹಿಸಿ ಮುಂದೆ ಬಂದರೆ ಸಹಾಯ ಮಾಡುತ್ತೇವೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ,—ಯಾರಿಗೆ ಸೆಲೆಕ್ಷನ್ ಬೇಕಿತ್ತು ಅವರಿಗೆ ಮಾಡಿಲ್ಲ, ಸುಮ್ಮನೆ ದುಡ ಖರ್ಚುಮಾಡಲಿಕ್ಕೋಸ್ಕರ ಮಾಡಿದ್ದೀರಿ. ನೀವು ಮಾಡಿರತಕ್ಕ ಸೆಲೆಕ್ಷನ್ ತಪ್ಪಾಗಿ ಕಾಣುತ್ತದೆ.

೬-೦೦ ಪಿ. ಎಂ,

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ನೀವು ಮಾಡಿರುವ ಸೆಲೆಕ್ಷನ್ ತಪ್ಪಲ್ಲವೇ?

ಶ್ರೀ ಎಂ. ಸಿ. ಬಸಪ್ಪ —ಮಾನ್ಯ ಸದಸ್ಯರಾದ ತಮ್ಮೇಗೌಡರು ಹೇಳಿದಂತೆ ಯಾರನ್ನು ಸೆಲೆಕ್ಟ್ ಮಾಡಬೇಕೋ ಅವರನ್ನು ಬಿಟ್ಟು ಬೇರೆಯವರನ್ನು ಮಾಡಿರುವುದು ವ್ಯರ್ಥಾ ಹಣ ಖರ್ಚಲ್ಲವೇ ? ಸ್ವಯಂ ಉದ್ಯೋಗವನ್ನು ನಡೆಸುವುದಕ್ಕೆ ಇಷ್ಟ ಇಲ್ಲದಿರುವವರಿಗೆ ಅವಕಾಶ ಕೊಟ್ಟಿದ್ದೀರಿ, ಇಷ್ಟ ಇರುವವರಿಗೆ ಅವಕಾಶವನ್ನು ಕೊಟ್ಟಿಲ್ಲ.

ಶ್ರೀ ಕೆ. ರಾಮಭಟ್.—ಮಾನ್ಯ ಅಧ್ಯಕ್ಷರೇ ಈ ಸ್ಕೀಂ ಇದೆಯೆಂದು ನನಗೇ ಗೊತ್ತಿಲ್ಲ. ಏಕೆಂದರೆ ಈ ಸ್ಕೀಂ ಬಗ್ಗೆ ಸರಿಯಾದ ಪ್ರಚಾರವನ್ನೇ ಮಾಡಿದಂತೆ ಕಾಣುತ್ತಿಲ್ಲ. ನಮ್ಮ ಜಿಲ್ಲೆಯಲ್ಲಿ ಬಹುಶಃ ಇದನ್ನು ಗುಟ್ಟಾಗಿ ಮಾಡಿದ್ದೀರೆಂದು ಕಾಣುತ್ತದೆ.

ಶ್ರೀ ಬಿ. ರಾಮಯ್ಯ.—ತಾವು ತಾಲ್ಲೂಕು ಅಭಿವೃದ್ಧಿ ಮಂಡಲಿಯ ಸದಸ್ಯರು. ಪ್ರತಿಯೊಂದು ವಿಚಾರವೂ ಅಲ್ಲೇ ತೀರ್ಮಾನವಾಗುವುದು. ಏಕೆಂದರೆ ಐ.ಆರ್. ಡಿ. ಪಿ.; ಡಿ.ಪಿ.ಎ.ಪಿ.; ಎನ್.ಆರ್.ಇಪಿ; ಟೈ ರಬಲ್ ಪ್ರೋಗ್ರಾಂಸ್ ಕೇಂದ್ರ ಸರ್ಕಾರದಿಂದ ಬರತಕ್ಕಂಥ ಕಾರ್ಯಕ್ರಮಗಳು ರಾಜ್ಯ ಸರ್ಕಾರ ದಿಂದ ತೆಗೆದುಕೊಳ್ಳತಕ್ಕ ಕಾರ್ಯಕ್ರಮಗಳು ಇನ್ನೂ ಮುಂತಾದುವೆಲ್ಲಾ ನಿಮ್ಮ ತಾಲ್ಲೂಕು ಅಭಿವೃದ್ಧಿ ಮಂಡಲಿಯಲ್ಲೇ ಚರ್ಚೆಮಾಡಿ ತೀರ್ಮಾನ ತೆಗೆದುಕೊಳ್ಳುತ್ತಾರೆ. ಇದರಲ್ಲಿ ಗುಟ್ಟಾಗಿ ಇಡುವುದೇನಿದೆ?

ಶ್ರೀ ಎಂ. ಸಿ. ನಾಣಯ್ಯ.—ಎನ್. ಆರ್. ಡಿ. ಪಿ. ಯನ್ನು ಗುಟ್ಟಾಗಿ ಇಡುವಂಥಾದ್ದೇ ಅಲ್ಲ. ಒಬ್ಬ ಕೂಲಿಯವನಿಗೆ ೫ ರೂ.ನಂತೆ ಕೊಡಬೇಕು. ಅಂದರೆ ಅಲ್ಲಿ ಏನು ನಡೆದಿದೆ ಎಂದರೆ, ತಾಲ್ಲೂಕಿ

ಬೋರ್ಡ್‌ನ ಒಳಗಡೆ ಇರತಕ್ಕವರೆಲ್ಲರೂ ಒಂದುರೀತಿಯ ಕಂಟ್ರಾಕರ್‌ಗಳಾಗಿ ೫—೫ ರೂ. ನಂತೆ ಕೊಟ್ಟಿದ್ದೇವೆಂದು ಹೆಬ್ಬೆಟ್ಟು ಒತ್ತಿಸಿಕೊಂಡು ಹಣ ಮಾಡಿಕೊಳ್ಳುತ್ತಿದ್ದಾರೆ. ಇದು ತಮಗೂ ಗೊತ್ತಿರಬಹುದು. ಉದ್ಯೋಗವನ್ನು ಸೃಷ್ಟಿ ಮಾಡಬೇಕೆಂಬ ಉದ್ದೇಶದಿಂದ ಈ ಯೋಜನೆಯನ್ನು ಸರ್ಕಾರದವರು ತಂದಿದ್ದಾರೆ. ಇವತ್ತು ನಮ್ಮ ಮಲೆನಾಡು ಭಾಗದಲ್ಲಿ ಮಣ್ಣು ಹೊರುವವರು ಕೂಡ ದಿವಸಕ್ಕೆ ೧೨ ರೂ.ಗೆ ಕಡಿಮೆ ಬರುವುದಿಲ್ಲ. ಅಂಥಾದ್ದರಲ್ಲಿ ನೀವು ೫ ರೂ. ಕೂಲಿ ಕೊಟ್ಟರೆ ಯಾರು ಬರುತ್ತಾರೆ ?

ಶ್ರೀ ಬಿ. ರಾಮಯ್ಯ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀಮಾನ್ ನಾಣಯ್ಯನವರು ಈ ವಿಚಾರದಲ್ಲಿ ಬಹಳ ಚೆನ್ನಾಗಿ ಮಾತನಾಡುತ್ತಾರೆ. ಈ ವಿಚಾರದಲ್ಲಿ ಅವರಿಗೆ ಬಹಳ ಆಸಕ್ತಿ ಇದೆ, ಆದರೆ ನಾನು ಉತ್ತರ ಕೊಡುವಾಗ ಮಾನ್ಯ ಸದಸ್ಯರು ಇಲ್ಲಿ ಇರಬೇಕು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ನಾನು ಉತ್ತರ ಕೊಡುವ ಸಂದರ್ಭದಲ್ಲಿ ನಾಲ್ಕೈದು ಜನ ಕೂಡ ಇರುವುದಿಲ್ಲ. ರೂರಲ್ ಡೆವಲಪ್‌ಮೆಂಟ್ ಸ್ಥಿತಿ ಹೇಗಾಗಿದೆ ಎಂದರೆ ಮಾನ್ಯ ಸದಸ್ಯರ ಆಸಕ್ತಿಯಂತಾಗಿದೆ.

ಶ್ರೀ ಎಂ. ಸಿ. ನಾಣಯ್ಯ.—ರೂರಲ್ ಡೆವಲಪ್‌ಮೆಂಟ್‌ಗೆ ಹೋಗತಕ್ಕ ಮರವೆಲ್ಲಾ ಅರ್ಬನ್ ಭಾಗದಲ್ಲಿರತಕ್ಕ ಜನರ ಜೊತೆಯಲ್ಲಿ ಅರ್ಬನ್ ಡೆವಲಪ್‌ಮೆಂಟ್ ಆಗುತ್ತಿದೆ.

ಶ್ರೀ ಬಿ. ರಾಮಯ್ಯ.—ನನ್ನ ಇಲಾಖೆಯ ಬಗ್ಗೆ ಎನ್. ಆರ್. ಇ ಪಿ. ಬಗ್ಗೆ ತಾಲ್ಲೂಕು ಅಭಿವೃದ್ಧಿ ಮಂಡಲಿಗಳಲ್ಲಿ ಏನು ನಡೆಯುತ್ತಿದೆ ಎಂಬುದನ್ನು ತಾವು ಗಮನಿಸಿದ್ದೀರಿ ಆದ್ದರಿಂದ ಅದರ ಬಗ್ಗೆ ತಮ್ಮ ಅಭಿಪ್ರಾಯವನ್ನು ಕೊಡಿ. ಅದಕ್ಕೆ ನಾನು ಉತ್ತರ ಕೊಡುತ್ತೇನೆ. ನಮ್ಮ ಕಾರ್ಯಕ್ರಮ ಏನೆಂಬುದನ್ನು ಹೇಳಿದರೆ ತಾವು ಬಹುಶಃ ಅದನ್ನು ಮೆಚ್ಚುತ್ತೀರೆಂದು ಅಂದುಕೊಂಡಿದ್ದೇನೆ.

ಶ್ರೀ ಎಂ. ಸಿ. ಬಸಪ್ಪ —ಇ. ಎ. ಎಸ್. ಮತ್ತು ಎನ್. ಆರ್. ಇ. ಪಿ. ಬಗ್ಗೆ ನಾನು ಒಂದೆರಡು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಕರ್ನಾಟಕದ ಹಳ್ಳಿಗಾಡಿನಲ್ಲಿರತಕ್ಕ ವ್ಯವಸಾಯ ಕೂಲಿಗಾರರಿಗೆ ವರ್ಷಪೂರ್ತಿ ಕೆಲಸ ಸಿಕ್ಕಲಿ ಎಂಬ ಉದ್ದೇಶದಿಂದ ವರ್ಷದಲ್ಲಿ ಕನಿಷ್ಟ ೧೦೦ ದಿವಸವಾದರೂ ಕೆಲಸ ಕೊಡಬೇಕೆಂದು ಈ ಸ್ಕೀಂನ್ನು ತಂದಿದ್ದೀರಿ. ಆದರೆ ಕೇಂದ್ರ ಸರ್ಕಾರದವರು ನ್ಯಾಷನಲ್ ರೂರಲ್ ಎಂಪ್ಲಾಯ್‌ಮೆಂಟ್ ಪ್ರೋಗ್ರಾಂ ಅಂತ ಸ್ವಲ್ಪ ಬದಲಾವಣೆ ಮಾಡಿ ರಾಜ್ಯ ಸರ್ಕಾರದವರು ಇಷ್ಟು ಹಣವನ್ನು ಖರ್ಚು ಮಾಡುತ್ತಾರೋ ಅದರಲ್ಲಿ ಅರ್ಧ ಭಾಗವನ್ನು ನಾವು ಕೊಡುತ್ತೇವೆಂದು ಹೇಳಿದರು. ಆದರೆ ಇದರ ಗತಿ ಏನಾಗಿದೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಇವತ್ತು ತಾವು ಈ ವಿಧಾನಸೌಧದಲ್ಲಿ ಕೂತು ಮಾಡಿದಂಥ ಕಾನೂನು ಏನಾಗಿದೆ ? ಕೇವಲ ಕಟ್ಟಡಗಳನ್ನೇ ತೆಗೆದುಕೊಳ್ಳಬೇಕೆಂದು ಹೇಳಿದ್ದೀರಿ...

ಶ್ರೀ ಬಿ. ರಾಮಯ್ಯ.—ಇದರಲ್ಲಿ ನಾವು ಯಾವುದೇ ತರಹದ ನಿರ್ದೇಶನವನ್ನೂ ಜಿಲ್ಲಾಧಿಕಾರಿಗಳಿಗೆ ಕೊಟ್ಟಿಲ್ಲ. ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಪ್ರತಿಯೊಬ್ಬ ಜಿಲ್ಲಾಧಿಕಾರಿಯವರಿಗೂ ಒಂದೊಂದು ಕೋಟಿ ರೂ. ನಂತೆ ಹಣವನ್ನು ಬಿಡುಗಡೆ ಮಾಡಿದ್ದೇವೆ. ಕೇಂದ್ರ ಸರ್ಕಾರದವರದ್ದು ಎಂಟು ಕೋಟಿ ರೂ. ನಮ್ಮ ಸರ್ಕಾರದ್ದು ಎರಿಟುಕೋಟಿ ರೂ. ಒಟ್ಟು ಹದಿನಾರು ಕೋಟಿ ರೂ. ಗಳನ್ನು ಎನ್. ಆರ್.ಇ.ಪಿ.ಗೆ ಖರ್ಚು ಮಾಡಿದ್ದೇವೆ. ನಾವು ಇ.ಎ.ಎಸ್. ನ್ನು ತೆಗೆದುಹಾಕಿದ್ದೇವೆಂದು ತಾವು ಹೇಳಿದೀರಿ ಇದು ಕೂಲಿಗಾಗಿ ಕಾಳು ಯೋಜನೆಗೆ ಸಂಬಂಧಪಟ್ಟಿದ್ದು, ಇದಕ್ಕೆ ತಗುಲುವ ಪೂರ್ತವನ್ನು ಸಂಪೂರ್ಣವಾಗಿ ಕೇಂದ್ರ ಸರ್ಕಾರದವರೇ ಕೊಡುತ್ತಿದ್ದರು. ಆನಂತರ ಅದನ್ನು ಅವರು ನಿಲ್ಲಿಸಿ ಏನು ಹೇಳಿದರು ಎಂದರೆ ನೀವು ೫೦ ಭಾಗ ಹಾಕಿ ನಾವು ೫೦ ಭಾಗ ಹಾಕುತ್ತೇವೆಂದು ಹೇಳಿದರು. ಇ.ಎ. ಎಸ್. ಯೋಜನೆ ಇದು ರಾಜ್ಯ ಸರ್ಕಾರದ ಯೋಜನೆ. ಈ ಯೋಜನೆ ಇಡೀ ಭರತಖಂಡದಲ್ಲಿರತಕ್ಕ ರಾಜ್ಯಗಳ ಪೈಕಿ ನಮ್ಮ ರಾಜ್ಯ ಹಾಗೂ ಮಹಾರಾಷ್ಟ್ರದಲ್ಲಿ ಮಾತ್ರ ಇದೆ. ನಾವು ಇನ್ನೂ ೫೦ ಪರ್ಸೆಂಟ್ ಹಣವನ್ನು ಸೇರಿಸಿ ೩೬೫ ದಿವಸವೂ ಕೆಲಸ ಕೊಡುವಂತೆ ಮಾಡಬೇಕೆಂದು ಮಾಡಿದೆವು. ಮಾನ್ಯ ಸದಸ್ಯರು ಒಂದುಸಾರಿ ನನ್ನ ಹತ್ತಿರ ಬಂದು ಮಾತನಾಡುತ್ತಾ ಸ್ವಾಮಿ ನಮ್ಮ ಕಾರ್ಯಕ್ರಮದ ಪ್ರಕಾರ ೧೦೦ ದಿವಸ ನಮ್ಮ ಊರಿನಲ್ಲಿ ಒಂದು ಬಿಲ್ಡಿಂಗ್ ಕಟ್ಟುವುದಕ್ಕೆ ಪ್ರಾರಂಭ ಮಾಡಿದರು. ಅದು ಮೇಲ್ಛಾವಣಿ ಮಟ್ಟಕ್ಕೆ ಬರುವ ಹೊತ್ತಿಗೆ ನೂರು ದಿವಸ ಮುಗಿದು ಹೋಯಿತು. ಆನಂತರ ಮಳೆಗಾಲ ಪ್ರಾರಂಭವಾಯಿತು. ಮತ್ತೆ ಯಾವಾಗ ಈ ಕೆಲಸವನ್ನು ಪೂರೈಸುತ್ತೀರೆಂದು ಕೇಳಿದರು. ಅಂಥ ಕಡೆ ಮಾನ್ಯ ಸದಸ್ಯರುಗಳ ಅಭಿಪ್ರಾಯಗಳನ್ನು ಸಂಗ್ರಹಿಸಿ ವರ್ಷಪೂರ್ತಿ ಕೆಲಸ ಕೊಟ್ಟರೆ ಅಂಥ

ಕಟ್ಟಡಗಳನ್ನು ಮುಂಗಿಸುವುದಕ್ಕೆ ಅನುಕೂಲವಾಗುತ್ತದೆಂದು ಹಣವನ್ನು ಕೊಡಲಾಗುತ್ತದೆ. ಇದನ್ನು ಯಾವುದೇ ಕಾರಣ ಕಡಿಮೆ ಮಾಡದೆ ಅಂಥ ಕಾರ್ಯಗಳನ್ನು ಮುಂದುವರಿಸಿಕೊಂಡು ಹೋಗುತ್ತಿದ್ದೇವೆ.

ಶ್ರೀ ಎಂ. ಸಿ. ಬಸಪ್ಪ —ನೀವು ವಿಧಾನ ಸೌಧದಲ್ಲಿ ಕುಳಿತುಕೊಂಡು ಹೇಳುತ್ತಿದ್ದೀರಿ. ಆದರೆ ನಿಮ್ಮ ಕಾರ್ಯಕ್ರಮ ಗ್ರಾಮ ಮಟ್ಟದಲ್ಲಿ ಕಾರ್ಯಗತನಾಗುವಾಗ ವಿಕಾರ ರೂಪ ಹೊಂದಿರುತ್ತದೆ. ಇನ್ನೊಂದು ವಿಚಾರ ಏನೆಂದರೆ ಶಾಲಾ ಕಟ್ಟಡಗಳಲ್ಲೂ ಕೂಡ ನೀವು ಎರಡು ವ್ಯತ್ಯಾಸಗಳನ್ನು ಮಾಡಿದ್ದೀರಿ. Private members have all started private high schools. ಈ ವರ್ಷ ಇನ್ನೂರು ಶಾಲೆಗಳನ್ನು ಕೊಟ್ಟಿದ್ದೀರಿ. ಅದರಲ್ಲಿ ನೂರು ಶಾಲೆಗಳು ಸರ್ಕಾರೀ ಶಾಲೆಗಳು ಇರಬಹುದು. ಉಳಿದ ನೂರು ಪ್ರೈವೇಟ್ ಟ್ರಸ್ಟ್‌ಗೆ ಸೇರಿದವು ಇರಬಹುದು. ಪ್ರತ್ಯೇಕವಾಗಿ ಇವುಗಳಿಗೆ ಹಣ ಕೊಡುವುದು ಬೇಡ. ಕೇವಲ ಸರ್ಕಾರಿ ಶಾಲೆಗಳಿಗೆ ಮಾತ್ರ ಹಣವನ್ನು ಉಪಯೋಗಿಸ ಬೇಕೆಂದು ತಾವು ಕ್ವಾಲಿಫಿಕೇಷನ್ ಕೊಟ್ಟಿದ್ದೀರಿ. ಹಾಗಾದರೆ ಟ್ರಸ್ಟ್ ಪ್ರಾಪರ್ಟಿ ಯಾರದ್ದು ಸ್ವಾಮಿ ? ಇವತ್ತು ಒಂದು ಟ್ರಸ್ಟ್ ಅನೇಕ ವಿದ್ಯಾ ಸಂಸ್ಥೆಗಳನ್ನು ನಡೆಸುತ್ತಿರುತ್ತದೆ. ಅದರಲ್ಲಿ ಮಿಸ್ ಮ್ಯಾನೇಜ್‌ಮೆಂಟ್ ಆದರೆ ಅದನ್ನು ಸರ್ಕಾರಕ್ಕೆ ತೆಗೆದುಕೊಳ್ಳುತ್ತೀರಿ. ನಿಮ್ಮ ಉದ್ದೇಶವಾದರೂ ಏನು ? ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಜನರಿಗೆ ಕೆಲಸವನ್ನು ಒದಗಿಸಬೇಕೆಂಬುದು. ಆದರೆ ಇವತ್ತು ಆ ಮೂಲ ಉದ್ದೇಶವನ್ನೇ ನೀವು ಮರೆತಿದ್ದೀರಿ. ಆದರೆ ನಾವು ಮರೆತಿಲ್ಲ ಎಂದು ತಾವು ಹೇಳಬಹುದು, ಅದು ಬೇಡ ತಾವು ತಮ್ಮ ಜಿಲ್ಲಾಧಿಕಾರಿಗಳಿಗೆ ಫೋನ್ ಮಾಡಿ ಅವರಿಂದ ಮಾಹಿತಿ ತರಿಸಿಕೊಂಡು ಅನಂತರ ತಾವು ತಾವು ಉತ್ತರ ಕೊಡುವಾಗ ನಮಗೆ ಹೇಳಿ.

ಶ್ರೀ ಬಿ. ರಾಮಯ್ಯ.—ನಾವು ಜಿಲ್ಲಾಧಿಕಾರಿಗಳ ಕೈಗೆ ಒಂದು ಕೋಟಿ ರೂ. ಕೊಟ್ಟು ಆಯಾಯ ಭಾಗಗಳಲ್ಲಿ ಯಾವುದು ಅತ್ಯಂತ ಅಪಶ್ಯಕವಾಗಿರುತ್ತದೆ. ಮತ್ತು ಖಾಯಂ ಆಗಿ ಸಮಾಜದಲ್ಲಿ ಉಳಿಯತಕ್ಕ ಕೆಲಸಗಳನ್ನು ಮಾಡಿ ಎಂದು ಹೇಳಿದ್ದೇವೆ ಅಷ್ಟೆ. ಪಂಚಾಯಿತ್ ಹಾಲ್ ಸ್ಕೂಲ್ ಬಿಲ್ಡಿಂಗ್ಸ್ ಇಂಥಾದ್ದು ಮಾಡಿ, ಒಂದು ಪೇಳಿ ರಸ್ತೆ ಮುಂತಾದವುಗಳ ಅಪಶ್ಯಕತೆ ಕಂಡುಬಂದರೆ ಅದನ್ನೇ ಮಾಡಿಸಿಕೊಳ್ಳಿ.

ಅಧ್ಯಕ್ಷರು.—ಈಗ ಬಂದಿರತಕ್ಕ ಪ್ರಶ್ನೆ ಏನೆಂದರೆ ಕೊಟ್ಟ ಹಣ ಖರ್ಚಾಗದೆ ಅಲ್ಲೇ ಉಳಿದಿದೆ ಎಂಬುದು.

ಶ್ರೀ ಬಿ. ರಾಮಯ್ಯ ನಮ್ಮ ರಾಜ್ಯದಲ್ಲಿ ಇದಕ್ಕಿಂತ ಹೆಚ್ಚಿನ ಉಪಯೋಗವನ್ನು ಪಡೆದಂಥ ಜನರು ಬಹಳವಾಗಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಗೆ ಮೊದಲು ಕೊಟ್ಟಿದ್ದ ೧.೯ ಕೋಟಿ ರೂ. ಪೂರ್ತಿಯಾಗಿ ಖರ್ಚಾಗಿ ಮತ್ತು ೨೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇನೆ. ನಮ್ಮ ಜಿಲ್ಲೆಯಲ್ಲಿ ಕಾಫಿ ಮತ್ತು ಅಡಿಕೆ ಬೆಳೆ ಜಾಸ್ತಿ. ನಮ್ಮದು ಶ್ರೀಮಂತ ಜಿಲ್ಲೆ ಎಂದು ಹೇಳುತ್ತಿದ್ದೀರಿ. ನಮ್ಮ ತೋಟಗಳಲ್ಲಿ ಕೆಲಸ ಮಾಡಬೇಕಾದರೆ ಕೂಲಿಯವರಿಗೆ ೨—೧೦ ರೂ. ವರೆಗೂ ಕೂಲಿಯನ್ನು ಕೊಡಬೇಕಾಗುತ್ತದೆ. ನಮ್ಮಲ್ಲಿ ಇದುವರೆಗೆ ೭೬ ಲಕ್ಷ ರೂ. ಖರ್ಚಾಗಿದೆ. ನಮ್ಮ ಸಾಗರವಲ್ಲಿ ಮಂಜೂರಾಗಿದ್ದ ಎಲ್ಲಾ ಶಾಲಾ ಕಟ್ಟಡಗಳೂ, ಪಂಚಾಯಿತಿ ಹಾಲುಗಳೂ, ಸರ್ಕಾರಿ ಹೈಸ್ಕೂಲುಗಳೂ ಕಟ್ಟಡ ಕಟ್ಟಿ ಪೂರ್ತಿಯಾಗಿವೆ. ಆದರೆ ನಿಮ್ಮಲ್ಲಿ ಏನಾಗಿದೆ ಎಂದರೆ ಆ ಸ್ಥಳೀಯ ಜನರ ಮನೋಭಾವ, ಅಲ್ಲಿಯ ಪರಿಸರ ಇನ್ನೂ ಬದಲಾವಣೆ ಆಗಿಲ್ಲ...

ಶ್ರೀ ವಿ. ಎಂ. ಫಾಡಿ. —ಬಿಲ್ಡಿಂಗ್ಸ್ ಮಾತ್ರ ತೆಗೆದುಕೊಳ್ಳಿ ರಸ್ತೆಗಳನ್ನು ತೆಗೆದುಕೊಳ್ಳಬೇಡಿ ಎಂದು ಆದೇಶಕೊಟ್ಟಿದ್ದೀರಿ.

ಶ್ರೀ ಎಂ.ಸಿ. ಬಸಪ್ಪ.—ಅಧ್ಯಕ್ಷರೇ ಮಾನ್ಯ ಮಂತ್ರಿಗಳ ಮಾತಿನಲ್ಲಿ ನನಗೆ ಸಂಪೂರ್ಣವಾದ ವಿಶ್ವಾಸವಿದೆ. ಆದರೆ ನನ್ನ ಮಾತಿನಲ್ಲಿ ಮಾನ್ಯ ಮಂತ್ರಿಗಳಿಗೆ ವಿಶ್ವಾಸವಿಟ್ಟರೆ ಸಾಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇದಕ್ಕೆ ಒಂದು ನಿದರ್ಶನ ಕೊಡುತ್ತೇನೆ. ನಿಮ್ಮ ಸೆಕ್ರೆಟರಿಎಟ್‌ನಿಂದಲೇ ಕ್ವಾಲಿಫಿಕೇಷನ್ ಹೋಗಿದೆ. ಪ್ರೈವೇಟ್ ಹೈಸ್ಕೂಲುಗಳನ್ನು ಕೊಡಬೇಡಿ ಎಂದು. ಇದು ಒಂದು, ಎರಡನೆಯದು ಅವರು ಡೆಪ್ಯುಟಿ ಕಮೀಷನರ್‌ರವರನ್ನು ಕಾಂಟ್ಯಾಕ್ಟ್ ಮಾಡಿ..

ಶ್ರೀ ಎಚ್.ಡಿ. ದೇವೇಗೌಡರು.—ಈಗ ಪ್ರೈವೈಟ್ ಹೈಸ್ಕೂಲುಗಳಿಗೆ ಗ್ರಾಂಟ್ ಇನ್ ಏಡ್ ರೂಲ್ಸ್ ಅಪ್ಲೈಯಾಗುತ್ತದೆ. ಈಗ ಬಿಲ್ಡಿಂಗ್ ಕಾಸ್ಟ್ ಎಷ್ಟು ಬೆಚ್ಚವಾಗುತ್ತದೆ ಅದರ ೫೦ ಪರ್ಸೆಂಟ್ ಪ್ರೈವೇಟ್‌ಮ್ಯಾನೇಜ್‌ಮೆಂಟ್ ಕೊಡಬೇಕೆಂತಲೂ ಇನ್ನು ೫೦ ಪರ್ಸೆಂಟ್ ಗೌವರ್ನಮೆಂಟ್ ಕೊಡಬೇಕೆಂತಲೂ ಗ್ರಾಂಟ್‌ಇನ್‌ಎಡ್ ರೂಲ್ಸ್‌ನಲ್ಲಿ ಇರುತ್ತದೆ. ಈ ರೂಲ್ಸ್‌ನ್ನೆ ಅಮೆಂಡ್‌ಮಾಡಬೇಕಾಗುತ್ತದೆ, ಅದನ್ನು ಮಾಡಿದರೆ ಹಣ ಬೆಚ್ಚಮಾಡಲಿಕ್ಕೆ ಬರುವುದಿಲ್ಲ. That is the technical snag.

ಶ್ರೀ ಎಂ.ಸಿ. ಬಸಪ್ಪ.—ಈಗ ಈ ಯೋಜನೆಯ ಮೂಲ ಉದ್ದೇಶ ಪ್ರಸ್ತುತ ಜನರಿಗೆ ಹಣವನ್ನು ಕೊಡಬೇಕು, ಕೆಲಸವನ್ನು ಕೊಡಬೇಕು ಎನ್ನುವುದೇ ಸರ್ಕಾರದ ಮೂಲಕ ಉದ್ದೇಶ.

ಶ್ರೀ ಜೆ.ಹೆಚ್. ಪಟೇಲ್.—ಗೌವರ್ನಮೆಂಟ್, ಮಿನಿಸ್ಟರ್ ಇದ್ದಾರೆ. ಅವರು ಮಂತ್ರಿಗಳನ್ನು ಕನ್‌ಸಲ್ಟ್‌ಮಾಡಬಹುದು. ಏತಕ್ಕೆಂದರೆ ಮಾನ್ಯ ಬಸಪ್ಪನವರು ಸ್ಪಷ್ಟವಾಗಿ ಸರ್ಕಾರ ಎಷ್ಟು ಅಸಮರ್ಥವಾಗಿದೆ ಎಂದು ಹೇಳಿದ್ದಾರೆ. ಅವರ ಹೇಳಿಕೆಗಳಿಗೆ ನಾವು ಸಪೋರ್ಟ್ ಮಾಡುತ್ತಿದ್ದೇವೆ. ಸರ್ಕಾರ ಸಾಕಷ್ಟು ಅದಕ್ಷತನವನ್ನು ಹೇಳುತ್ತಿದ್ದಾರೆ, ಅದಕ್ಕೆ ಮಂತ್ರಿಗಳು ಮುದ್ಯೆ ಮುದ್ಯೆ ಉತ್ತರ ಕೊಡಬಾರದು.....

ಶ್ರೀ ಎಂ.ಸಿ. ಬಸಪ್ಪ.—ಮಾನ್ಯ ಜೆ.ಹೆಚ್. ಪಟೇಲರಿಗೆ ಅವರು ಏತಕ್ಕೆ ಈರೀತಿ ಅರ್ಥಮಾಡಿಕೊಂಡರೋ ಗೊತ್ತಿಲ್ಲ. ನಾನು ಕೆಲವು ಸಲಹೆಗಳನ್ನು ಕೊಡುತ್ತಿದ್ದೇನೆ. ನಾನು ಯಾವದೃಷ್ಟಿಯಿಂದ ಹೇಳುತ್ತಿದ್ದೇನೆ ಎಂದರೆ ಯೋಜನೆಗಳ ಉಪಯುಕ್ತತೆ, ಏನು ಇದೆ ಅದು ಹಳ್ಳಿಗಾಡಿನಲ್ಲಿರತಕ್ಕಂಥ ಜನರಿಗೆ ಮುಟ್ಟಬೇಕು. ಆರೀತಿಯಾದರೆ ಗ್ರಾಮಅಭಿವೃದ್ಧಿ ಸಾಧನೆಯಾಗುತ್ತದೆಂದು ಸಲಹೆ ಕೊಡುತ್ತಿದ್ದೇನೆಯೇ ಹೊರತು ಸರ್ಕಾರ ಅಸಮರ್ಥತೆಯಾಗಿದೆ ಎಂದು ಹೇಳುವಂಥದ್ದನ್ನು ಅವರು ಹೇಳುವುದನ್ನು ನನ್ನ ಕೈಯಲ್ಲಿ ಏತಕ್ಕೆ ಹೇಳಿಸುತ್ತಿದ್ದಾರೆ. ಸ್ವಾಮಿ ಇಷ್ಟುಹೇಳಿ ಮಾನ್ಯ ಮಂತ್ರಿಗಳಿಗೆ ಈಗಾಗಲೇ ಟೈಮ್ ಜಾಸ್ತಿ ತೆಗೆದುಕೊಂಡಿರುವುದರಿಂದ ಒಂದೇ ಒಂದು ವಿಚಾರವನ್ನು ಅವರಿಗೆ ಮನವರಿಕೆ ಮಾಡುತ್ತೇನೆ. ಡೆವೆಲಪ್‌ಮೆಂಟ್ ಡಿಪಾರ್ಟ್‌ಮೆಂಟ್ ಎಂದು ಏನು ಇದೆ ಅದಕ್ಕೆ ಕೇಡರ್ ತಯಾರು ಮಾಡತಕ್ಕಂಥದ್ದು ಬಹಳ ಒಳ್ಳೆಯದು. ತಮ್ಮ ಐ.ಎ.ಎಸ್. ಆಫೀಸರ್‌ಗಳು ಇರುತ್ತಾರಲ್ಲ ಅವರನ್ನು They are trained at Mussorie. Please train them in some villages. Place them as BDO in a block for one year. ಅವರು ಒಂದೊಂದು ವರ್ಷ ಅಥವಾ ಎರಡೆರಡು ವರ್ಷ ಬಿ.ಡಿ.ಓ. ಆಗಿ ಕೆಲಸ ಮಾಡಿದರೆ ಜನರ ಸಂಪರ್ಕ ಸಿಗುತ್ತದೆ. ಅವರ ಕಷ್ಟ ಏನು ಎನ್ನುವುದು ಅರ್ಥವಾಗುತ್ತದೆ. ಆಗ ಅವರು ಯೋಜನೆಯನ್ನು ಜನರಿಗೆ ಅನುಕೂಲವಾಗುವಂತೆ ಯಾವರೀತಿ ಆಳವಡಿಸಿಕೊಳ್ಳಬೇಕೋ ಅರೀತಿ ಆಳವಡಿಸಿಕೊಳ್ಳುತ್ತಾರೆ. ಅರೀತಿ ಮಾಡಿ. ತಮ್ಮ ರಿಪೋರ್ಟ್‌ನಲ್ಲಿ ಏನು ಹೇಳಿದ್ದೀರಿ ಎಂದರೆ ಹೆಚ್ಚಿಚ್ಚು ಹಣವನ್ನು ಪ್ರೊವೈಡ್ ಮಾಡಿದ್ದೇ ಎಂದು ಹೇಳಿದ್ದೀರಿ. ಸ್ವಾಮಿ ಒಂದು ಹೆಡ್‌ನಲ್ಲಿ ೫೦ ಪರ್ಸೆಂಟ್ ಖರ್ಚುಮಾಡಿದ್ದಾರೆಂದರೆ ಹತ್ತಿರ ಹತ್ತಿರ ೪೧ ಪರ್ಸೆಂಟ್ ಲ್ಯಾಪ್ಸ್ ಆಗಿದೆ. ತಾವು ಹೇಳುತ್ತೀರಿ ಡಿ.ಆರ್.ಡಿ.ಎಸ್.ಗೆ ಹೋಗುತ್ತದೆಂದು. ಅಲ್ಲಿ ಅದು ಅಕ್ಯುಮಲೇಟ್ ಆಗುತ್ತದೆಯೇ ಹೊರತು 'ಮತ್ತೇನು ಆಗುವುದಿಲ್ಲ' ಆದಕ್ಕೆ ತಾವು ಏನಾದರೂ ಮಾರ್ಗವನ್ನು ಕಂಡುಹಿಡಿದು ಇವತ್ತು ಗ್ರಾಮಪಂಚಾಯ್ತಿಗಳಲ್ಲಿ ಖರ್ಚುಮಾಡಬೇಕೇ ಹೊರತು ಅಭಿವೃದ್ಧಿ ಸಾಧನೆ ಮಾಡುತ್ತೇವೆಂದು ಹೇಳಿದರೆ ಆದು ಸಾಧ್ಯವಾಗುವುದಿಲ್ಲ. ಕಷ್ಟವಾಗುತ್ತದೆ. ಆದ್ದರಿಂದ ಮಾನ್ಯ ಬೇಗಾನೆ ರಾಮಯ್ಯನವರನ್ನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಅವರು ಸ್ವಲ್ಪ ಚುರುಕಾಗಿ ಕೆಲಸಮಾಡಬೇಕೆಂದು ಹೇಳಿ ಪ್ರಾರ್ಥನೆ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಡಾ॥ ತಿಮ್ಮೇಗೌಡರು ಪ್ರಸ್ತಾಪ ಮಾಡಿದರು, ಇಬ್ಬರು ಹೇಳಿಕೆ ಕೊಟ್ಟು ಮೇಲೆ ಮತ್ತೆ ನಡೆದಂಥ ವಿಚಾರ ಏನು ಇದೆ ಅದು ನಡವಳಿಕೆಯಿಂದ ತೆಗೆದುಹಾಕಬೇಕು, ಅದ್ದ ಅದರಲ್ಲಿ ಹೋಗಬಾರದೆಂದು ಹೇಳಿದ್ದಾರೆ. ಎಕ್ಸ್‌ಪಂಜ್ ಯಾವುದು ಮಾಡಬೇಕು ಎನ್ನತಕ್ಕಂಥದ್ದು ಕೆಲವು ಸ್ಪಷ್ಟವಾಗಿ ಇಲ್ಲಿ ಇವೆ. National interest, derogatory to the dignitaries ಎಂದು ಹೀಗೆ ಕೆಲವು ಪಲ್ಲ ಇದೆ. ಪೂರ್ಣವಾಗಿ ನನಗೆ ವರದಿ ಬಂದಿಲ್ಲ. ಸ್ವಲ್ಪ ಬಂದಿದೆ ಬಂದದ್ದನ್ನು ನಾನು ಓದಿಬಿಡುತ್ತೇನೆ.

ಶ್ರೀ ಸಿ.ಎಂ. ಇಬ್ರಾಹಿಂರವರು.—ರಾಜ್ಯದಲ್ಲಿ ಯಾರು ಜಾತಿವಾದಿಗಳು.

ಶ್ರೀ ಸಿ.ಎಂ. ಹಿಬ್ರಾಹಿಂರವರು.—ಈ ರಾಜ್ಯದಲ್ಲಿ ಇಬ್ಬರ ಮಾತುಗಳನ್ನು ಕೇಳಿದ ಮೇಲೆ ನಾನು ಕೂಡ ಈ ಸಂದರ್ಭದಲ್ಲಿ ಮಾತನಾಡಬೇಕೆನಿಸಂತ್ತದೆ. ಏತಕ್ಕೆಂದರೆ.....

ಶ್ರೀ ಜೆ. ಎಚ್. ಪಟೇಲ್ —ನಾನು ಒಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ಮತ್ತೆ ಜೆ.ಹೆಚ್. ಪಟೇಲರು ಕ್ರೀಯಾಲೋಪ ಆದನಂತರ ಶ್ರೀ ಸಿ.ಎಂ. ಇಬ್ರಾಹಿಂರವರು ಈ ರಾಜ್ಯದಲ್ಲಿ ಯಾರು ಜಾತಿವಾದಿಗಳಿಲ್ಲ. ಎಲ್ಲ, ಜಾತಿ ವಾದಿಗಳು ಎಂದು ವಿಧಾನ ಸಭೆ ಶುರುವಾದಾಗಿನಿಂದ, ಹಿಗೆಂದಮೇಲೆ ಶ್ರೀ ಲಕ್ಷ್ಮೀಸಾಗರ್‌ರವರು ಎಲ್ಲ ಜಾತಿವಾದಿಗಳಲ್ಲ.

ಶ್ರೀ ಸಿ.ಎಂ. ಇಬ್ರಾಹಿಂ.—ಗಾಂಧಿವಾದಿಗಳು ಎಂದು ಹೇಳುತ್ತೀರಾ? ತಾವು ಏತಕ್ಕೆ ಈ ರಾಜ್ಯದಲ್ಲಿ ಯಾರು ಜಾತಿವಾದಿಗಳು ಇಲ್ಲ ಜಾತಿವಾದಿಗಳ ಮೇಲೆ ವಿಶ್ವಾಸ ವಿಲ್ಲವೆಂದು ಹೇಳುತ್ತೀರಿ. ವಿಧಾನಸಭೆ ಪ್ರಾರಂಭವಾಗಿ ಲೋಕಸಬೆ ಚುನಾವಣೆಗಳು ಆದಮೇಲೆ.....

ಅಧ್ಯಕ್ಷರು.—ಈಗ ಆ ಪ್ರಶ್ನೆ ಬೇಡ ಆಕಸ್ಮಿಕವಾಗಿ ಮಾತನಾಡುವಾಗ ರೆಫರೆನ್ಸ್ ಮಾಡಿದರೆ ಆ ಪ್ರಸಂಗದಲ್ಲಿ ಕ್ಲಾರಿಫಿಕೇಶನ್ ಮಾಡಬೇಕೆಂದು ಮಂಂತ್ರಿಗಳು ಹೇಳುತ್ತಾರೆ.

ಶ್ರೀ ಸಿ.ಎಂ. ಇಬ್ರಾಹಿಂ.—ಬೇಕಾದರೆ ಬಿಟ್ಟು ಬಿಡೋಣ.... ಈ ದೇಶದಲ್ಲಿರತಕ್ಕಂಥ ದಲಿತ ಪೀಡಿತ ಶೋಷಿತ ಜನ ಏನು ಇದ್ದಾರೆ. ಅವರು ಎಚ್ಚೆತ್ತಿದ್ದಾರೆ. ಮಂತ್ರಿಗಳು ಇದನ್ನು ತಡೆಗಟ್ಟಲು ಸಾಧ್ಯವಾಗುತ್ತಿತ್ತು. ಇಲ್ಲದಿದ್ದರೆ ಇದನ್ನು ತಡೆಗಟ್ಟುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ ಎನ್ನುವ ಅಭಿಪ್ರಾಯವನ್ನು ಸದನದ ಮೂಲಕ ಸಾರ್ವಜನಿಕರಿಗೆ ತಿಳಿಸಲು ಇಚ್ಚೆ ಪಡುತ್ತೇನೆ. ಶ್ರೀಮತಿ ರೇಣುಕಾರಾಜೇಂದ್ರನ್ ರವರು ಆಯಿತು. ಆಮೇಲೆ ಇಬ್ರಾಹಿಂ ರವರು ಆಯಿತು.''

ಅಧ್ಯಕ್ಷರು.—ನಾನು ಈ ಮಾತನ್ನು ಮನೆಯ ಮುಂದೆ ಹೇಳುತ್ತಿದ್ದೇನೆ. ಅಂಥದ್ದು ಇದರಲ್ಲಿ ಅನ್ ಪಾರ್ಲಿಮೆಂಟ್‌ರಿ ಯಾವ ಶಬ್ದವೂ ಬರುವುದಿಲ್ಲ. ಅಥವಾ ಈಗ ಏನೆಂದು ಹೇಳಿದರೆ ಕೆಲವು ಹರಿಜನ ಗಿರಿಜನರು, ಅಲ್ಪಸಂಖ್ಯಾತರು ಎಂದು ಹೇಳಿ ಸಮಾಜದಲ್ಲಿರತಕ್ಕಂಥ ಬೇರೆ ಬೇರೆ ವರ್ಗಗಳು ಇದಾವೆ. ಅವರಲ್ಲಿ ಒಂದು ಮನಸ್ಸಿಗೆ ಬೇಡ ಮಾಡತಕ್ಕಂಥ ಒಂದು ಅರ್ಥ ಬರಲಿಕ್ಕೆ ಸಾಧ್ಯವಾಗುವ ರೀತಿಯಲ್ಲಿ ಈ ಮಾತು ಇದ್ದರೆ ಅದನ್ನು ಎಕ್ಸ್‌ಪುಂಜ್ ಮಾಡಬೇಕಾದರೆ ನ್ಯಾಷನಲ್ ಇಂಟರೆಸ್ಟ್, ಡಿರೋಗೇಟರಿ, ಹೇಗೆ ಎಂತಲು ಬರುತ್ತದೆ. ಜೊತೆಗೆ ಈ ಮಾತನ್ನೂ ಕೂಡ ಹೇಳಿದ್ದಾರೆ. ಸಮಾಜದಲ್ಲಿ ವರ್ಗಗಳಲ್ಲಿ ಒಂದೊಂದನ್ನು ಎತ್ತಿ ಕಟ್ಟತಕ್ಕಂಥ ದೃಷ್ಟಿಯಿಂದ ಆದರಲ್ಲೂ ಏನಾದರೂ ಪ್ರಜೋದನೆಯ ರೀತಿಯಲ್ಲಿ ಇದ್ದರೆ ಅದನ್ನು ಕೂಡ ತೆಗೆದು ಹಾಕತಕ್ಕಂಥದ್ದು ಉತ್ತಮ ಎನ್ನುವ ಮಾತನ್ನೂ ಪಾರ್ಲಿಮೆಂಟರಿ ಪ್ರೋಸೀಜರ್‌ನಲ್ಲಿ ಕೊಟ್ಟಿದೆ. ಅದನ್ನು ಹಾಗೆ ಮಾಡುವಾಗ ನಾವು ಅವರನ್ನು ಕೇಳಬೇಕಾಗುತ್ತದೆ. ಮತ್ತೆ ಇನ್ನೊಂದು ಪ್ರಶ್ನೆ ಬಂದಿದೆ. ಈ ಸದನದಲ್ಲಿ ಮಂತ್ರಿಗಳು ಇದನ್ನು ಹೇಳುತ್ತಾರೆಂದು ಹೇಳಿದರು. ಮಾನ್ಯ ಸದಸ್ಯರು ಅದನ್ನು ಹೇಳಿದ್ದು ನಿಜವೆಂದು ಹೇಳಿದರು. ಹೀಗೆಂದ ಮೇಲೆ ಅಧ್ಯಕ್ಷರಿಗೆ ಸಾಬೀತು ಮಾಡುವುದಕ್ಕೆ ತಯಾರಾಗಬೇಕು. ಮಾಡಿದಮೇಲೆ ಅವರು ಏನು ತೀರ್ಮಾನ ಕೊಡುತ್ತಾರೋ ಹಾಗೆ ಎಂದು ಹೇಳಿ ಮುಂದೆ ಯಾರೂ ಇಬ್ಬರೂ ಕೂಡ ಸಾಬೀತು ಮಾಡುತ್ತೇವೆ ಎನ್ನುವ ಮಾತನ್ನು ಹೇಳಲಿಲ್ಲ. ಹಾಗಾದರೆ ಹೇಳಿಕೆಯಲ್ಲಿ ಕೊಡಬೇಕಾಗುತ್ತದೆ. ವಿನಃ ಮುಂದುವರಿಸಲಿಕ್ಕೆ ಸಾಧ್ಯವಿಲ್ಲ. ಆದರೆ ಈ ಒಂದು ಮಾತು ಏನು ಇದೆ ಅದು ಸ್ವಲ್ಪ ಯಾರಿಗೂ ಕೂಡ ಮನಸ್ಸಿಗೆ ಅನ್‌ಪಾರ್ಲಿಮೆಂಟರಿಯಾಗಿ ಹೇಳಲಿಲ್ಲ. ಆದರೆ ಓದುವಾಗ ಹಿನ್ನೆಲೆಯಲ್ಲಿ ಓದುತ್ತಾ ಬರುವಾಗ ಆ ಮಾತು ಬರಲಿಕ್ಕೆ ಸಾಧ್ಯತೆ ಇರುತ್ತದೆ. ಮಾನ್ಯ ಸದಸ್ಯರು ಇಲ್ಲಿ ಸದನದಲ್ಲಿ ಇಲ್ಲ. ಎಲ್ಲೊ ಹೋಗಿದ್ದಾರೆ. ನಾನು ಕೂಡ ಎಕ್ಸ್‌ಪುಂಜ್ ಮಾಡುವಾಗ ಅವರನ್ನು ಕೇಳಿ ವಿತ್ ಡ್ರಾ ಮಾಡಿಕೊಳ್ಳುತ್ತೀರಾ ಎಂದು ಕೇಳಿ ಮಾಡಬೇಕಾಗುತ್ತದೆ. ಅವರನ್ನು ಕೇಳದೆ ಮಾಡುವುದು ಸರಿಯಾಗುವುದಿಲ್ಲ.

ಶ್ರೀ ಹೆಚ್. ಎಲ್. ತಿಮ್ಮೇಗೌಡರು.—ಪತ್ರಿಕೆಗಳಲ್ಲಿ ಬಂದರೆ.

ಅಧ್ಯಕ್ಷರು.—ಪತ್ರಿಕೆಗಳಿಗೂ ಹೇಳುತ್ತೇನೆ. ಆ ಮಾತುಗಳನ್ನು ಪತ್ರಿಕೆಗಳಲ್ಲಿ ಪಬ್ಲಿಷ್ ಮಾಡ ಬೇಡ ಎಂದು ಹೇಳುತ್ತೇನೆ. ನಾಳೆ ಸದಸ್ಯರು ಬಂದಮೇಲೆ ಅವರು ಕೇಳಿ...

SRI H. D. DEVEGOWDA.—Suo motu

MR. SPEAKER.—Suo motu ಮಾಡಲಿಕ್ಕೆ ಅವಕಾಶವಿದೆ. ಅವಕಾಶವಿಲ್ಲವೆಂದಲ್ಲ. ಆದರೆ...

ಶ್ರೀ ಎಚ್. ಡಿ. ದೇವೇಗೌಡ.—ಸರ್ಕಾರ ಈ ಸದನದಲ್ಲಿ ಬಹುಶಃ ನಮಗೆಲ್ಲರಿಗಿಂತಲೂ ತಮಗೆ ಈ ಸದನದ ಕೆಲಸದಲ್ಲಿ ಅನುಭವ ಇದೆ ಎನ್ನತಕ್ಕಂಥದ್ದನ್ನು ನಾವೆಲ್ಲರೂ ಒಪ್ಪಿಕೊಳ್ಳುತ್ತೇವೆ. ಆದರೆ ಇದೆ ಕಡೆ ಕುಳಿತು ವಿರೋಧಪಕ್ಷದಲ್ಲಿ ತಮ್ಮ ಕರ್ತವ್ಯವನ್ನು ನಿರ್ವಹಣೆ ಮಾಡತಕ್ಕಂಥ ಕಾಲದಲ್ಲಿ ಒಬ್ಬ ಮಂತ್ರಿ ಅಥವಾ ಮಂತ್ರಿ ಇಲಾಖೆಯಮೇಲೆ ಆಪಾದನೆ ಮಾಡತಕ್ಕಂಥ ಸನ್ನಿವೇಶ ಬಂದಾಗ ಮಂತ್ರಿಗಳ ಜಾತಿಯನ್ನು ಮುಂದೆ ಒಡ್ಡಿ ಈ ಸದನದ ಮುಖಾಂತರ ರಕ್ಷಣೆ ತೆಗೆದುಕೊಳ್ಳತಕ್ಕಂಥ ಪ್ರಯತ್ನ ಮಾಡತಕ್ಕಂಥ ಪ್ರಚೋದನೆ ಏನು ಇದೆ ಬಹುಶಃ ಆದರಿಂದ ಇಲ್ಲಿ ಕುಳಿತು ಕೆಲಸ ಮಾಡಲಿಕ್ಕೆ ಕಷ್ಟ ವಾಗುತ್ತದೆ. ಮಂತ್ರಿಗಳು ಆಕಸ್ಮಾತ್ತಾಗಿ ಯಾವುದೇ ಜಾತಿಯವರು ಇರಬಹುದು. ಆದರೆ ಇಡೀ ಸರ್ಕಾರ ನಡೆಸತಕ್ಕಂಥ ಈ ಸದನದಲ್ಲಿ ಜವಾಬ್ದಾರಿಯನ್ನು ಹೊತ್ತು ಕೆಲಸ ಮಾಡತಕ್ಕಂಥವರು ಕೇವಲ ಯಾವುದೋ ಒಂದು ವರ್ಗಕ್ಕೆ ಅಥವಾ ಒಂದು ಜಾತಿಯನ್ನು ಪ್ರತಿನಿಧಿಸತಕ್ಕಂಥ ಪ್ರಶ್ನೆ ಬರುವುದಿಲ್ಲ. ಈ ಸದನದಲ್ಲಿ ಕೆಲಸ ಮಾಡತಕ್ಕಂಥ ಕಾಲದಲ್ಲಿ ಈವತ್ತು ಶ್ರೀಮಾನ್ ಜೀವರಾಜ್‌ಆಳ್ವರವರು ಹೇಳಿದಂಥ ಆಪಾದನೆ ಇದು. ಮಂತ್ರಿಮಂಡಲದ ಕೆಲಸ ಕಾರ್ಯನಿರ್ವಹಣೆಯನ್ನು ತಾವು ಸದನದಲ್ಲಿ ಸಮೀಕ್ಷೆ ನಡೆಸಿದಾಗ ಇದರ ಬಗ್ಗೆ ಅಭಿಪ್ರಾಯ ಸದನಕ್ಕೆ ಬರತಕ್ಕಂಥದ್ದಕ್ಕೆ ಸಾಕಷ್ಟು ಅವಕಾಶವಿದೆ. ಅದನ್ನು ಅಲ್ಲಿಗೆ ನಿಲ್ಲಿಸುತ್ತೇನೆ. ಅವರು ಆ ಜಾಗದಲ್ಲಿ ತನ್ನ ಕಾರ್ಯವನ್ನು ನಿರ್ವಹಣೆ ಮಾಡತಕ್ಕಂಥ ಕಾಲದಲ್ಲಿ ಅವರು ನಡೆಸಿದಂಥ ರೀತಿಯಲ್ಲಿ ಅವರು ಯಾವ ಯಾವ ಸಂದರ್ಭದಲ್ಲಿ ಹೇಗೆ ಹೇಗೆ ನಡೆದುಕೊಂಡಂಥದ್ದನ್ನು ಈ ಸದನದಲ್ಲಿ ವಿಮರ್ಶೆ ಮಾಡತಕ್ಕಂಥದ್ದಕ್ಕೆ ಆ ಇಲಾಖೆಯ ಡಿಮ್ಯಾಂಡ್ ಬಂದಾಗ ಸಾಕಷ್ಟು ಅವಕಾಶವಿದೆ. ಆದರಿಂದ ಯಾರು ಅವರಿಬ್ಬರ ಕೋಣೆಯಲ್ಲಿ ನಡೆದಂಥ ಮಾತಿಗೆ ನಡೆದಿರುಕೊಂಡಿರತಕ್ಕಂಥ ನಡವಳಿಕೆ ಆಧಾರದ ಮೇಲೆ ಈ ಸದನ ತನ್ನ ಬಗ್ಗೆ ಬರತಕ್ಕಂಥದ್ದನ್ನು ತಡೆಗಟ್ಟುವುದಕ್ಕೆ ಯಾರಿಗೂ ಸಾಧ್ಯವಿಲ್ಲ.

ಆದರೆ ತಾವು ಮಾಡಿರತಕ್ಕ ತಪ್ಪುಗಳನ್ನು ಅವರ ಜಾತಿಯ ಸೋಗಿನಿಂದ ಮುಚ್ಚಿಕೊಳ್ಳಲು ಪ್ರಯತ್ನ ಮಾಡುವುದಾದರೆ ನಾವು ವಿರೋಧಪಕ್ಷದಲ್ಲಿ ಕುಳಿತು ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಮಾನ್ಯ ಇಬ್ರಾಹಿಂರವರು ಮಾತನಾಡಿದಂತಹ ಸಂದರ್ಭದಲ್ಲಿ ಅವರ ಮನಸ್ಸಿನ ವೇದನೆಯನ್ನು ವ್ಯಕ್ತ ಪಡಿಸಿದಾಗ ಮಾನ್ಯಮಂತ್ರಿಗಳು ಎನ್‌ಕ್ವಾಯರಿ(ಸಿ.ಬಿ.ಐ.) ಮಾಡಿಸುತ್ತೇನೆಂದು ಹೇಳಿದ್ದಾರೆ. ಆ ಸನ್ನಿವೇಶದಲ್ಲಿ ವ್ಯಕ್ತಿಯ ಬಗ್ಗೆ ಮಾತನಾಡುವುದಕ್ಕಾಗುವುದಿಲ್ಲ. ಎನ್‌ಕ್ವಾಯರಿ ಮಾಡಿದ ಮೇಲೆ ವರದಿಯನ್ನು ಸದನದಮುಂದೆ ಇಟ್ಟರೆ ಸತ್ಯ ಅಸತ್ಯ ಜನತೆಗೆ ಗೊತ್ತಾಗಿ ದೋಷ ಪರಿಹಾರವಾಗುತ್ತದೆ. ಅವರು ಹೇಳಿರತಕ್ಕುದ್ದು ಅಲ್ಪಸಂಖ್ಯಾತರ ಹೆಸರಿನಲ್ಲಿ ಆಪಾದನೆಗಳನ್ನು ಮಾಡಿ, ಜಾತಿಯ ಹೆಸರು ಹೇಳಿಕೊಂಡು ರಕ್ಷಣೆ ಮಾಡಿಕೊಳ್ಳಲು ಪ್ರಚೋದನೆ ಮಾಡುವುದಾದರೆ ನಾವಿಲ್ಲಿ ಕೆಲಸ ಮಾಡುವುದು ಕಷ್ಟವಾಗುತ್ತದೆ. ಜಾತಿಯ ಹೆಸರಿನಲ್ಲಿ ಯಾರು ಏನು ಬೇಕಾದರೂ ಮಾಡಿ ತಪ್ಪುಗಳನ್ನು ಮುಚ್ಚಿಕೊಳ್ಳಲು ಜಾತಿಯನ್ನೆ ಒಂದು ಸಾಧನವನ್ನಾಗಿ ಉಪಯೋಗಿಸಿಕೊಳ್ಳಲು ತಾವೇ ಅವಕಾಶ ಕೊಟ್ಟಹಾಗೆ ಆಗುತ್ತದೆ. ತಮಗೆ ಇರತಕ್ಕ ಅಧಿಕಾರವನ್ನು ಉಪಯೋಗ ಮಾಡಿ ಕಡತದಿಂದ ತೆಗೆದುಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ.ಎಚ್. ಪಟೀಲ್.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರಾದ ಇಬ್ರಾಹಿಂರವರು ಮಾತನಾಡುವಾಗ ಮೇಲ್ಜಾತಿಯವರು ಯಾರಾದರೂ ತಪ್ಪುಗಳನ್ನು ಮಾಡಿದರೆ ಅವರ ಮೇಲೆ ಆಪಾದನೆಗಳನ್ನು ಮಾಡುವುದಿಲ್ಲ ಪತ್ರಿಕೆಗಳಲ್ಲೂ ಪ್ರಕಟಿಸುವುದಿಲ್ಲವೆಂದು ಹೇಳಿದ್ದಾರೆ. ಹಿಂದುಳಿದವರ ಮತ್ತು ಅಲ್ಪಸಂಖ್ಯಾತರ, ಪರಿಶಿಷ್ಟ ಜನಾಂಗದ ಬಗ್ಗೆ ಇವರೇ ಬಹುಶಃ ಹಿತ ಚಿಂತಕರು ಆ ಜಾತಿಗಳನ್ನು ಗಂತ್ತಿಗೆ ತೆಗೆದುಕೊಂಡ ಹಾಗೆ ಮಾತನಾಡಿದರು, ಆ ರೀತಿ ಮಾತನಾಡಬಾರದು. ಇಬ್ರಾಹಿಂ ಮೇಲೆ, ಶ್ರೀಮತಿ ರೇಣುಕಾ ರಾಜೇಂದ್ರರವರ ಮೇಲೆ ಈ ಜನಾಂಗದವರ ಮೇಲೆ ಆಕ್ರಮಣ ಮಾಡುತ್ತಾರೆಂದು ಅವರು ಭಾವಿಸಿಕೊಳ್ಳುವುದು ತಪ್ಪು. ಮತ್ತೊಂದು ವಿಷಯ ಹೇಳುವುದಕ್ಕೆ ಇಚ್ಛಿಪಡುತ್ತೇನೆ ಮೇಲ್ಜಾತಿಯವರು ಸಿಕ್ಕಿಹಾಕಿಕೊಳ್ಳದ ಹಾಗೆ ಮಾಡಿರುತ್ತಾರೆ. ಹಿಂದುಳಿದವರಿಗೆ ಆ ಪ್ರಾವೀಣ್ಯತೆ ಕಡಿಮೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ಆ ರೀತಿ ಹೇಳುವುದು ತಪ್ಪು. ನಾನು ಶ್ರೀಕಂಠಯ್ಯನವರ ಮೇಲೆ ಆಪಾದನೆ ಮಾಡಿದ್ದೇನೆ. ಅದೇ ರೀತಿ ಬೊಮ್ಮಾಯಿಯವರು ಪಬ್ಲಿಕ್ ಅಕೌಂಟ್ಸ್ ಕಮಿಟಿ ಛೇರ್ಮನ್ ಆಗಿದ್ದಾಗ ಮಾಣಿಕ್‌ರಾವ್ ಮೇಲೆ ಆಪಾದನೆ ಮಾಡಿದ್ದಾರೆ. ಜಾತಿಯನ್ನು ಪರಿಗಣಿಸದೆ ಪ್ರಶ್ನೆ ಮಾಡಿದ್ದೇವೆ.

ಶ್ರೀ ಜೆ. ಎಚ್. ಪಟೇಲ್.—ಇಬ್ರಾಹಿಂ ಅಂಡ್ ಕಂಪನಿ ಮಾಡಿ ಸಿಕ್ಕಿಹಾಕಿಕೊಂಡು ಒದ್ದಾಡುವುದಕ್ಕಿಂತ ಬೇರೆಯವರು ಎಷ್ಟು ಬುದ್ಧಿವಂತಿಕೆಯಿಂದ ಮಾಡುತ್ತಾರೋ ಆ ರೀತಿ ಮಾಡಿ ಕೋಟ್ಯಾಂತರ ರೂಪಾಯಿಗಳನ್ನು ತೆಗೆದುಕೊಂಡು ಪಾರ್ಟಿ ಬಿಟ್ಟು ಬಿಡಿರಿ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು.—ನಾನು Suo moto ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲವೆಂದು ಹೇಳುವುದಿಲ್ಲ. ತೆಗೆದುಕೊಳ್ಳುವುದಕ್ಕೆ ಅಧಿಕಾರ ಇರುತ್ತದೆ. ಅವರನ್ನು ಕೇಳುವುದು ಸಂಪ್ರದಾಯ ಇದೆ. ಆದ್ದರಿಂದ ಅವರು ಹೇಳಿರುವ ಮಾತನ್ನು ಓದಿದರೆ ಅನ್‌ಪಾರ್ಲಿಮೆಂಟರಿ ಪದ ಇರುವ ಹಾಗೆ ಬರುತ್ತದೆ. ಅನ್‌ಪಾರ್ಲಿಮೆಂಟರಿ ಪದ ಇದ್ದರೆ ತೆಗೆದುಹಾಕಬಹುದು. ಅದು ನಡವಳಿಕೆಗೆ ಹೋಗಬಾರದು ಅದು ನನ್ನ ಅಭಿಪ್ರಾಯ. ಅವರನ್ನು ಕೇಳಿದರೆ ಅವರು ವಿತ್‌ಡ್ರಾ ಮಾಡಿದರೆ ಸರಿಯಾಗುತ್ತದೆ. ಇಲ್ಲದೆ ಹೋದರೆ ನನ್ನ ಅಧಿಕಾರವನ್ನು ಉಪಯೋಗಿಸಲಿಕ್ಕೆ ಬರುತ್ತದೆ.

ಶ್ರೀ ಎಂ. ಸಿ. ನಾನಯ್ಯ.—ಕಾನೂನಿನಲ್ಲಿ ಅವಕಾಶ ಇರುವಾಗ ಏತಕ್ಕೆ ಮಾಡಬಾರದು?

ಅಧ್ಯಕ್ಷರು.—ಕಾನೂನನ್ನೇ ಹಿಡಿದುಕೊಂಡರೆ ಈ ಸಭೆ ನೀರಸವಾಗುತ್ತದೆ.

ಶ್ರೀ ಎಂ. ಸಿ. ನಾನಯ್ಯ.—ತಮ್ಮ ಗಮನಕ್ಕೆ ಬಂದಿದೆ ಇದನ್ನು ಪರಿಶೀಲನೆ ಮಾಡಬೇಕು. ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿಕೆ ಕೊಟ್ಟರು. ನಂತರ ಮಾನ್ಯ ಆಳ್ವರವರು ಕೂಡ ಹೇಳಿಕೆ ಕೊಟ್ಟಿದ್ದಾರೆ. ಅದು ಆದಮೇಲೆ ಏನೇನು ನಡೆದಿದೆ? ತಾವು ಸಂಪ್ರದಾಯವನ್ನು ಉಳಿಸಿಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು.—ಅನ್‌ಪಾರ್ಲಿಮೆಂಟರಿ ಪದಗಳು ಈ ಸಭೆಯ ನಡವಳಿಕೆಯಲ್ಲಿ ಹೋಗಬಾರದು, ಹೋಗಿದ್ದರೆ ತೆಗೆದುಹಾಕಬೇಕಾಗುತ್ತದೆ.

ಶ್ರೀ ಎಂ. ಸಿ. ನಾನಯ್ಯ.—ತಾವು ತಮಗಿರತಕ್ಕ ಅಧಿಕಾರವನ್ನು ಚಲಾವಣೆ ಮಾಡುವಾಗ ಅವರನ್ನು ಕೇಳುವ ಸೌಜನ್ಯವಾದರೂ ಏನು? ತಮ್ಮ ಹಕ್ಕನ್ನು ಏಕೆ ಚಲಾಯಿಸಬಾರದು?

ಅಧ್ಯಕ್ಷರು.—ಅದು ನಿಮ್ಮ ಅಭಿಪ್ರಾಯ.

ಶ್ರೀ ಎ. ಲಕ್ಷ್ಮೀಸಾಗರ್.—ಜಾತಿ ಮತ್ತು ವರ್ಗಗಳ ಹೆಸರು ಆಗಾಗ್ಗೆ ಬರುತ್ತದೆ. ಒಬ್ಬ ಒಂದು ಜಾತಿಯವನು ಮತ್ತೊಬ್ಬ ಜಾತಿಯವರನ್ನು ಹಿಯ್ಯಾಳಿಸುವುದಕ್ಕೆ ಈ ಸಭೆಯ ಸದಸ್ಯತ್ವದ ಅವಕಾಶವನ್ನು ಉಪಯೋಗಿಸಬಾರದು ಅದನ್ನು ನಾನು ಹೇಳುತ್ತಿಲ್ಲ ಕಾನೂನು ಇದೆ. ಆ ರೀತಿ ಮಾಡಿದರೆ ಅದು ಬೇರೆ ಘಟನೆಯಾಗುತ್ತದೆ. ಶ್ರೀಮಾನ್ ಇಬ್ರಾಹಿಂರವರು ವಿರೋಧ ಪಕ್ಷದವರು ಮಾಡಿರತಕ್ಕ ಕೆಲಸ ಎನ್ನುವ ಅರ್ಥ ಬರುತ್ತದೆ.

ಅಧ್ಯಕ್ಷರು.—ಹಾಗಲ್ಲ, ಮುಂದುವರಿದ ಯಾವ ಜಾತಿಯವರ ಮೇಲೂ ಯಾವ ಆಪಾದನೆಗಳನ್ನು ಯಾವ ಪಕ್ಷವೂ ಮಾಡುವುದಿಲ್ಲ, ಮಾಡುವ ಶಕ್ತಿಯು ಇಲ್ಲವೆಂದು ಹೇಳಿದ್ದಾರೆ. ವಿರೋಧ ಪಕ್ಷದವರು ಮಾತ್ರ ಏಂದು ಹೇಳುವುದಿಲ್ಲ. ಯಾವ ಪಕ್ಷದವರೂ ಎಂದು ಹೇಳಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಆ ತರಹ ಅಭಿಪ್ರಾಯ ಮಾಡುವುದು ಬೇಡ. ರಾಮಕೃಷ್ಣರವರು ಮತ್ತು ಮಾಣಿಕ್‌ರಾವ್ ಪಾಟೀಲ್‌ರವರ ಮೇಲೆ ಆಪಾದನೆಗಳನ್ನು ಮಾಡಿದ್ದೇವೆ. ಅವರು ಮಂತ್ರಿಗಳಾಗಿರಬಹುದು ಮುಖ್ಯ ಮಂತ್ರಿಗಳಾಗಿರಬಹುದು. ಸರ್ಕಾರದ ನೀತಿಯನ್ನು ಕಟುವಾಗಿ ಟೀಕೆ ಮಾಡುವುದು ನಮ್ಮ ಜವಾಬ್ದಾರಿ. ಜಾತಿಯನ್ನು ನೋಡಿ ಟೀಕೆ ಮಾಡುವುದಿಲ್ಲ. ಅದು ನಮ್ಮ ಸಂಪ್ರದಾಯವು ಅಲ್ಲ. ನಾವು ಟೀಕೆ ಮಾಡುವಾಗ ಅವರು ಆ ತರಹ ಭಿನ್ನಾಭಿಪ್ರಾಯ ಮಾಡಿಕೊಂಡ ಮಾತನಾಡುವುದು ಬೇಡ. ಎಷ್ಟು ಬೇಕೋ ಅಷ್ಟು ಮಾತನಾಡಿದರೆ ಒಳ್ಳೆಯದು.

ಅಧ್ಯಕ್ಷರು.—ಎಷ್ಟು ಮಾತನಾಡಬೇಕೋ ಅಷ್ಟು ಮಾತನಾಡಿದರೆ ಇಷ್ಟು ಕಷ್ಟವಾಗುವುದಿಲ್ಲ.

ಶ್ರೀ ವೈ. ರಾಮಕೃಷ್ಣ.—ಅವರ ಮನಸ್ಸಿನಲ್ಲಿ ಏನಿದೆ ಆದನ್ನು ವ್ಯಕ್ತಪಡಿಸಿದ್ದಾರೆ. ಆನ್‌ಪಾರ್ಲಿಮೆಂಟರಿ ಪದ ಆದ ಪಕ್ಷಕ್ಕೆ ಕಡಿತದಿಂದ ತೆಗೆದುಹಾಕಿ. ಅವರು ಹೇಳುವಾಗ ವರ್ಗಗಳ ವಿಚಾರ ಹೇಳಿದ್ದಾರೆ. ಅದರಲ್ಲಿ ಅಂತಹ ತಪ್ಪೇನು ಬರುವುದಿಲ್ಲ.

ಶ್ರೀ ಬಿ. ವಿ. ಕಕ್ಕಿಲಾಯ.—ಆ ರೀತಿ ಮಾತನಾಡಿದರೆ ಬೇರೆಯವರಿಗೆ ವೇದನೆಯಾಗುತ್ತದೆ.

ಅಧ್ಯಕ್ಷರು.—ಅದರ ಮೇಲೆ ಚರ್ಚೆ ಬೇಡ.

ಶ್ರೀ ಬಿ. ವಿ. ಕಕ್ಕಿಲಾಯ.—ಕಾನೂನು ಮಂತ್ರಿಗಳು ಹೇಳುವುದನ್ನು ನೋಡಿದರೆ ನಾವು ಯಾರನ್ನು ಟೀಕೆ ಮಾಡುವ ಹಾಗೆ ಇಲ್ಲ. ಅವರು ಹೇಳಿದ್ದು ನಮಗೆ ವೇದನೆಯಾಗುತ್ತದೆ. ನಾವು ಮಾತನಾಡುವಾಗ ಅವರ ಬಗ್ಗೆ ಮತ್ತು ಅಲ್ಪಸಂಖ್ಯಾತರ ಬಗ್ಗೆ ಮಾತನಾಡಿಲ್ಲ. ಹಿಂದುಳಿದವರು, ಹರಿಜನ-ಗಿರಿಜನರ ಬಗ್ಗೆ ಇವರಿಗೆ ಸಂಪೂರ್ಣವಾಗಿ ಕಳಕಳಿ ಇರುವವರು. ನಿಮಗಿಂತಲೂ ನಮಗೇನು ಕಡಿಮೆ ಕಳಕಳಿ ಇಲ್ಲ. ನಮಗೆ ವೇದನೆಯಾಗುತ್ತದೆ.

ಶ್ರೀ ವೈ. ರಾಮಕೃಷ್ಣ.—ಮಾನ್ಯ ಶ್ರೀಕಂಠಯ್ಯನವರ ಮೇಲೆ ದೇವೇಗೌಡರು, ಮಾಣಿಕ್‌ರಾವ್ ಪಾಟೀಲ್ ಮೇಲೆ ಬೊಮ್ಮಾಯಿಯವರು ಆಪಾದನೆಗಳನ್ನು ಮಾಡಿರುತ್ತಾರೆ ಅದರಿಂದ ಏನು ಅಪಘಾತ ಮಾಗುವುದಿಲ್ಲ. ಸಮಾಜಕ್ಕೂ ಅಪಘಾತವಾಗುವುದಿಲ್ಲ. ಆನ್ ಪಾರ್ಲಿಮೆಂಟರಿ ಅಲ್ಲದಿದ್ದರೆ ಅದು ರೆಕಾರ್ಡ್‌ನಲ್ಲಿ ಬರುತ್ತದೆ.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಇಬ್ರಾಹಿಂರವರು ಹೇಳಿದ್ದನ್ನು ಪತ್ರಿಕೆಗಳು ಪ್ರಕಟಣೆ ಮಾಡುವುದು ಬೇಡವೆಂದು ಹೇಳುತ್ತಿದ್ದೇನೆ. ಈಗ ಸಭೆಯು ಎದ್ದು ಪುನಃ ನಾಳೆ ೧೨ ಘಂಟೆಗೆ ಸೇರುತ್ತದೆ.

ಸಭೆಯು ಆರು ಗಂಟೆ ಮೂವತ್ತು ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ ೨೨ನೇ ಜುಲೈ ೧೯೮೨ರ ಶುಕ್ರವಾರ ಹನ್ನೆರಡು ಗಂಟೆಗೆ ಸೇರಲು ನಿಶ್ಚಯಿಸಿತು.